ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ಡೈಜೆಸ್ಟ್

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ ೨ ಅಕ್ಟೋಬರ್, ೨೦೦೧ ಸಂಚಿಕೆ ೩

ಭಯೋತ್ಪಾದಕತೆಯ ಸುಳಿಯಲ್ಲಿ

★

"ಹಿಂದ್ ಸ್ವರಾಜ್" –

ಇಂದಿನ ಸಮಸ್ಯೆಗಳಿಗೆ ಉತ್ತರವೆ?

★

ರಾಜೇಂದ್ರ ಸಿಂಗ್ ಆಧುನಿಕ ಭಗೀರಥ

★

ರೈತರಿಗಾಗಿ ಸ್ವಾವಲಂಬಿತ ವಿದ್ಯುತ್ ಶಕ್ತಿ

★

ಮಾನವನೇ ಮಾನವಕುಲವನ್ನು ನಾಶಮಾಡಿದಾಗ

★

ಪ್ರಾಥಮಿಕ ವಿಚಾರದತ್ತ

★

ಇನ್ನು ಯುದ್ಧ ಕೂಡದು

★ ಈ ಸಂಚಿಕೆಯಲ್ಲಿ ★

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ

ಸಂಪುಟ : ೨ ಸಂಚಿಕೆ : ೩

ಸೆಪ್ಟಂಬರ್ ೨೦೦೧

ಸಂಪಾದಕ

ಸುರೇಂದ್ರ ಕೌಲಗಿ

....

ಚಂದಾ ವಿವರ :

ವಾರ್ಷಿಕ : ರೂ. ೧೦೦/–

ಅರ್ಧವಾರ್ಷಿಕ : ರೂ. ೫೦/–

ಬಿಡಿ ಸಂಚಿಕೆ : ರೂ. ೧೦/–

ಸಂಪರ್ಕ ವಿಳಾಸ :

ಜನಪದ ಸೇವಾ ಟ್ರಸ್ಟ (ರಿ.)

ಕಲ್ಯಾಣಿ ಬೀದಿ,

ಮೇಲುಕೋಟೆ

ಜಿಲ್ಲಾ : ಮಂಡ್ಯ. ೫೭೧ ೪೩೧.

ದೂರವಾಣಿ:೦೮೨೩೬ ೪೮೭೫೪

ಈ ನಗರವನ್ನೊಮ್ಮೆ
ಸುತ್ತುಹಾಕಿದರೆ
ಕಾಣಬಹುದು
ಮಹಡಿ ಮೇಲ್ಮಹಡಿಗಳು
ಮಹಡಿಮನೆಗಳಿರುಕಿನಲ್ಲಿ
ಸೂರಿಲ್ಲದ ಮನೆಗಳು
ನೀರಿಲ್ಲದ ಮನೆಗಳು
ಬೆಳಕಿಲ್ಲದ ಮನೆಗಳು
ಹಣವ ಬಿತ್ತಿ ಹಣವ ಬೆಳೆದು
ಹಣಮಾಡುವ ಧನಿಕರು
ಹಸಿವ ನುರೆವ ಬಡವರು
ಕನಸು ಒಡೆದ ಯುವಕರು
ಭಗ್ನಗೊಂಡ ಹೃದಯಗಳು
ವಿಷವೇರಿದಂತೆ ಬೆಳೆಯುತ್ತಿರುವ
ಈ ನಗರದಲ್ಲಿ
ಮಾತುಗಳು ಎದೆ ತಾಗುವುದಿಲ್ಲ
ಹಕ್ಕಿ ಹಾಡು ಕೇಳುವುದಿಲ್ಲ
ತಂಗಾಳಿ ಮೈ ತೀಡುವುದಿಲ್ಲ
ಮುತ್ತಿಡಲು ಬಂದ ಬೆಳದಿಂಗಳಿಗೆ
ನೆಲವೇ ಸಿಗುವುದಿಲ್ಲ.

— ಕೆ.ಆರ್. ಸಂಧ್ಯಾರೆಡ್ಡಿ

ಚಂದಾದಾರರಲ್ಲಿ :–

ಚಂದಾ ಕಳುಹಿಸಿರುವ ಓದುಗರಿಗೆ.

ಕೃತಜ್ಞತೆಗಳು.

– ಪ್ರಕಾಶಕರು

ವಿಚಾರ ದೀಪ್ತಿ........

ಅನ್ಯಾಯದ ವಿರುದ್ಧ ಬರೆಯುವಾಗ ಆಕ್ರೋಶದ ಧ್ವನಿ ಇರಬೇಕು. ಅದು ಸ್ಪಂದನಶೀಲ ಮನಸ್ಸಿನ ಲಕ್ಷಣ. ಆದರೆ ಆ ಬರವಣಿಗೆ bad taste ನಲ್ಲಿದ್ದರೆ ಅಥವಾ ಕೇವಲ reactionary ಆಗಿದ್ದರೆ ಅಥವಾ ಪೂರ್ವಾಗ್ರಹ ಪೀಡಿತ ಕೊಂಕು ಮಾತುಗಳಾದರೆ ಅದು ಸಮಾಜದ ಕಲ್ಯಾಣವನ್ನು ಸಾಧಿಸಲು ವಿಫಲವಾಗುತ್ತದೆ. ಸಾಹಿತಿ ಬರೇ ಸೃಜನಶೀಲನಾದರೆ ಸಾಲದು, ಚಿಂತನಶೀಲನೂ ಆಗಿರಬೇಕು. ಸತ್ಯದ ಅರಿವಿನ ಬಗ್ಗೆ ಅದಮ್ಯ ಕಾಳಜಿಯಿರಬೇಕು. ತಾನು ಇದು ವರೆಗೆ ತಿಳಿದದ್ದಕ್ಕಿಂತ ಸತ್ಯ ಭಿನ್ನವಾಗಿದೆ ಅಂತ ಕಂಡಾಗ ತನ್ನ ಹಿಂದಿನ ಜನಪ್ರಿಯ ನಿಲುವನ್ನು fanatic ಆಗಿ ಮತ್ತೂಮತ್ತೂ ಸಮರ್ಥಿಸಿಕೊಳ್ಳಲು ಪ್ರಯತ್ನಿಸದೆ ಹೊಸತನವನ್ನು ಒಪ್ಪುವ ವಿನಯಬೇಕು. ಜನಪ್ರಿಯತೆಯ ಎದುರು ಸತ್ಯವನ್ನು, ತಾನು ಒಬ್ಬಂಟಿಯಾಗುವ ಅಪಾಯದ ಮಧ್ಯೆಯೂ, ಘೋಷಿಸುವ ಕೆಚ್ಚದೆಯಿರಬೇಕು. ಇಂಥ ಪ್ರಾಮಾಣಿಕ ಧೈರ್ಯ ಇರದಿದ್ದಲ್ಲಿ ಬರಹ ಕೇವಲ ತತ್‌ಕ್ಷಣದ ರಸೋದ್ರೇಕ ಪ್ರತಿಕ್ರಿಯೆಗಳಾದೀತೆ ವಿನಹ ಉತ್ತಮ ಸಾಹಿತ್ಯ ಅಂತ ಅನಿಸಿಕೊಳ್ಳಲಾರದು. ಇಂಥ ಶುದ್ಧ ಚಿಂತನೆ ಎಲ್ಲರಿಂದಲೂ ಸಾಧ್ಯವಿಲ್ಲ. ಆದುದರಿಂದಲೇ ಗುಂಪಿನ ಜೊತೆಗೂಡಿ 'ಗೋವಿಂದಾ' ಅಂತ ಹೇಳುವ pseudo ಸಾಹಿತಿಗಳೇ ನಮ್ಮೆದುರು ವಿಜೃಂಭಿಸುತ್ತಾರೆ. ಅಂತವರಿಗೆ ಗುಂಪಿನ ರಕ್ಷಣೆ, ಗುಂಪಿನ ಪುಕ್ಕಟೆ ಪ್ರಚಾರ ಸುಲಭದಲ್ಲಿ ಸಿಗುತ್ತದಲ್ಲವೆ?

– ಡಾ॥ ನಿ. ಮುರಾರಿ ಬಲ್ಲಾಳ

ಭಯೋತ್ಪಾದಕತೆಯ ಸುಳಿಯಲ್ಲಿ....

-ಸುರೇಂದ್ರ ಕೌಲಗಿ

ಭಯೋತ್ಪಾದಕತೆಯ ವಿರುದ್ಧ ಅಮೇರಿಕಾ ಸಂಯುಕ್ತ ಸಂಸ್ಥಾನ ಸಮರ ಸಾರಿದೆ. ಪ್ರಪಂಚದ ಒಂದೆರಡು ಇಸ್ಲಾಂ ದೇಶಗಳನ್ನು ಬಿಟ್ಟು ಉಳಿದ ದೇಶಗಳೆಲ್ಲವೂ ಅಮೇರಿಕಾದ ಜೊತೆ ಕೈಗೂಡಿಸಿವೆ. ವಿಶ್ವರಾಷ್ಟ್ರ ಸಂಸ್ಥೆಯು ಭಯೋತ್ಪಾದಕತೆಯ ವಿರುದ್ಧ ಹೋರಾಟದ ನೇತೃತ್ವ ವಹಿಸಿಕೊಳ್ಳಲು ಮುಂದೆ ಬಂದಿದೆ. ಈ ವಿಚಾರದಲ್ಲಿ ಭಾರತ ಹಿಂದೆ ಬಿದ್ದಿಲ್ಲ; ಪಾಕಿಸ್ತಾನವಂತೂ ಈ ಪರಿಸ್ಥಿತಿಯ ಆರ್ಥಿಕ ಹಾಗೂ ಶಸ್ತ್ರಾಸ್ತ್ರಗಳ ನೆರವಿನ ಲಾಭವನ್ನು ಅಮೆರಿಕೆಯಿಂದ ಪಡೆಯುತ್ತ ಮುಂದೆ ಸಾಗುತ್ತಿದೆ.

ಕಳೆದ ಸೆಪ್ಟಂಬರ್ ೧೧ ರಂದು ಅಮೆರಿಕೆಯ ನ್ಯೂಯಾರ್ಕ್, ವಾಶಿಂಗ್‌ಟನ್ ಮತ್ತು ಪೆಂಟ್‌ಗಾನ್ ಮೇಲೆ ಭಯೋತ್ಪಾದಕರ ಭೀಕರ ದಾಳಿಯಿಂದಾಗಿ ಇಂದು ಭಯೋತ್ಪಾದಕತೆಯ ವಿಷಯ ತೀವ್ರ ಚರ್ಚೆಗೆ ಹಾಗೂ ಭೀಕರ ಯುದ್ಧಕ್ಕೆ ಕಾರಣವಾಗಿದೆ; ಇಡೀ ಪ್ರಪಂಚವೇ ಭಯೋತ್ಪಾದಕತೆಯ ಸುಳಿಯಲ್ಲಿ ಸಿಕ್ಕಿಕೊಂಡು ಗಿರಗಿರನೆ ಸುತ್ತುತ್ತಿದೆ.

ಭಯೋತ್ಪಾದಕತೆಗೂ ಯುದ್ಧಕ್ಕೂ ನಂಟು ಉಂಟಾಗಿದೆ! ಮೊದಲಿನದನ್ನು ಉಚ್ಚಾಟಿಸಬೇಕಾದರೆ ಎರಡನೆಯದರ ಮೊರೆ ಹೋಗಬೇಕು; ಎರಡನೆಯದರ ಪರಿಣಾಮ ಪುನಃ ಮೊದಲನೆಯದರಲ್ಲಿ. ಹೀಗೆ ಸಾಗಿದೆ ಭಯೋತ್ಪಾದಕತೆಯ ಸುಳಿ.

ಭಯೋತ್ಪಾದಕತೆಗೆ ರಾಜಕೀಯ ಬಣ್ಣ ಬಂದಿರುವುದರಿಂದ ಅದರ ವ್ಯಾಪ್ತಿ ವಿಶ್ವವ್ಯಾಪಿಯಾಗಿದೆ, ತನ್ನ ತಲೆಯ ಮೇಲೆ ಅಣು ಅಸ್ತ್ರಗಳನ್ನು ಹೊತ್ತು ನಿಂತಿದೆ, ಅಲ್ಲದೆ, ಈ ಭಯೋತ್ಪಾದಕತೆಗೆ ಪರಿಹಾರ ರಾಜ್ಯಶಕ್ತಿಯಿಂದಲೇ ದೊರೆಯಬೇಕಾದುದೆಂಬ ಗ್ರಹಿಕೆ ಎಲ್ಲೆಲ್ಲಿಯೂ ಸ್ಥಿರವಾಗಿರುವುದರಿಂದ ಸಾಮಾನ್ಯ ಜನತೆ ಭಯೋತ್ಪಾದಕತೆಯ ಅಥವಾ ಆತಂಕವಾದದ ಬೆಂಕಿಗೆ ಉರುವಲಾಗುತ್ತಿದೆ. ಅಲ್ಲದೆ ಈ ಭಯೋತ್ಪಾದಕತೆಗೆ ಕಾರಣರಾದವರನ್ನೇ ಅದು ಭಸ್ಮಾಸುರನಂತೆ ನಾಶಮಾಡಲು ಹೊರಟಿದೆ.

ಭಯೋತ್ಪಾದಕರೆಂದರೆ ಯಾರು, ಭಯೋತ್ಪಾದನೆ ಅಂದರೆ ಏನು, ಭಯೋತ್ಪಾದನೆಗೆ ಕಾರಣಗಳಾವುವು, ಭಯೋತ್ಪಾದನೆಗೆ ರಾಜ್ಯಶಕ್ತಿ ಕಾರಣವಾದರೆ ಅದನ್ನು ನಿಯಂತ್ರಿಸುವವರು ಯಾರು, ಇತ್ಯಾದಿ ಅನೇಕ ಪ್ರಶ್ನೆಗಳಿಗೆ ಖಚಿತವಾದ, ಸರ್ವಸಮ್ಮತವಾದ, ಅಂತರ್‌ರಾಷ್ಟ್ರೀಯ ಕಾನೂನಿಗೆ ಒಳಪಡಬಹುದಾದ ಉತ್ತರಗಳೇ ಇನ್ನೂ ದೊರೆತಿಲ್ಲ, ಆಗಲೇ ದೇಶಗಳು ಒಂದರ ವಿರುದ್ಧ

ಒಂದು ಹೋರಾಡಿ ವಿನಾಶಕ್ಕೆ ಕಾರಣವಾಗುತ್ತಿವೆ, ಸಹಮಾನವ ಹತ್ಯೆಗೆ ಕಾರಣವಾಗುತ್ತಿವೆ, ಇಂದು ಎಲ್ಲ ದೇಶಗಳ ಸರ್ಕಾರಗಳು ಪರಸ್ಪರ ಅಸೂಯೆ, ದ್ವೇಷ, ಸೇಡು ಇವುಗಳ ದಳ್ಳುರಿಯಲ್ಲಿ ಸಿಕ್ಕಿಕೊಂಡಿವೆ. ಇದು ಸಾಲದೆಂಬಂತೆ ಧಾರ್ಮಿಕ ಅಸಹಿಷ್ಣುತೆಯ ಗಾಳಿ ಬೆಂಕಿಯನ್ನು ಹೆಚ್ಚಿಸುತ್ತಿದೆ.

ಭಯೋತ್ಪಾದಕತೆಗೂ, ಸಂಸ್ಕೃತಿಗೂ ಯಾವ ಸಂಬಂಧವೂ ಇಲ್ಲ. ಸಂಸ್ಕೃತಿ ಇರುವೆಡೆ ಭಯದ ವಾತಾವರಣ ಇರುವುದು ಸಾಧ್ಯವಿಲ್ಲ. ಇಂದು ಪ್ರಪಂಚ ದಾದ್ಯಂತ ಭಯೋತ್ಪಾದನೆ ಒಂದು ಧಂಧೆಯಾಗಿ ಪರಿಣಮಿಸಿದೆ. ಅತ್ಯಾಧುನಿಕ ಯುಗವೆಂದು ಕರೆಯಲ್ಪಡುತ್ತಿರುವ ಈ ೨೧ ನೇ ಶತಮಾನದಲ್ಲಿ ಮನುಷ್ಯ ಎಷ್ಟು ಸಂಸ್ಕೃತಿಹೀನನಾಗಿದ್ದಾನೆಂಬುದು ಸ್ಪಷ್ಟವಾಗಿ ಗೊತ್ತಾಗುತ್ತಿದೆ.

ಇಲ್ಲಿ ಇನ್ನೊಂದು ದುರಂತವೇನೆಂದರೆ ಭಯೋತ್ಪಾದನೆಯ ಜೊತೆಗೆ ಮುಖ್ಯವಾಗಿ ಇಸ್ಲಾಂ ಧರ್ಮದ ನಂಟು ಉಂಟಾಗಿದೆ. ಈ ನಂಟು ಇಷ್ಟೊಂದು ಗಟ್ಟಿಯಾಗಿದೆಯಲ್ಲ ಭಯೋತ್ಪಾದನೆಯೆಂದರೇನೇ ಇಸ್ಲಾಂ ಮತ್ತು ಇಸ್ಲಾಂ ಅಂದರೇನೇ ಭಯೋತ್ಪಾದನೆಯೆಂಬ ಅರ್ಥ ಬರುತ್ತದೆ. ಪ್ರಪಂಚದ ಯಾವ-ಯಾವ ದೇಶಗಳಲ್ಲಿ ಇಂದು ಅಶಾಂತಿಯುಂಟಾಗಿದೆಯೋ ಅಲ್ಲೆಲ್ಲ ಧರ್ಮಾಂಧ ಮುಸ್ಲೀಂರೇ ಕಾರಣರಾಗಿದ್ದಾರೆ ಎಂಬ ಅಭಿಪ್ರಾಯ ಸರ್ವತ್ರ ಮೂಡಿದೆ. ಚೀಣಾ, ರಶಿಯಾ, ಭಾರತ, ಆಫ್ರಿಕಾದ ಕೆಲ ದೇಶಗಳು ಮುಸ್ಲೀಂ ಮೂಲ ಭೂತವಾದಿಗಳ ಭಯೋತ್ಪಾದನೆಗೆ ಒಳಗಾಗಿವೆ. ಭಾರತವಂತೂ ಕಳೆದ ಐವತ್ತು ವರ್ಷಗಳಿಂದ ಈ ಪಿಡುಗನ್ನು ಅನುಭವಿಸುತ್ತಬಂದಿದೆ. ಆದ್ದರಿಂದ ಇಂದು ಭಯೋತ್ಪಾದನೆಯ ವಿರುದ್ಧ ಅಮೇರಿಕಾ ಸಾರಿರುವ ಯುದ್ಧ ವಿಶ್ವದಾದ್ಯಂತ ನಡೆಯುವ ಹಾಗೂ ಬಹಳ ದೀರ್ಘಕಾಲ ಯುದ್ಧವಾಗುವುದರ ಜೊತೆಗೆ ಎಲ್ಲಿ ಒಂದು ಧರ್ಮದ ವಿರುದ್ಧದ ಯುದ್ಧವಾಗಿ ರೂಪಾಂತರಗೊಳ್ಳುವುದೋ ಎಂಬ ಭೀತಿಯು ಸಹ ಇದೆ. ಈಗಾಗಲೇ ಅಫಘಾನಿಸ್ತಾನ ತನ್ನ ಮೇಲಿನ ದಾಳಿಯನ್ನು 'ಜಿಹಾದ್' ಕರೆಯ ಮೂಲಕ ಎದುರಿಸುವುದಾಗಿ ಹೇಳಿದೆ; ಪಾಕಿಸ್ತಾನ ಅಮೇರಿಕಾದ ಜೊತೆ ಸೇರಿ ಅಫಘಾನಿಸ್ತಾನದ ವಿರುದ್ಧ ದಾಳಿ ಮಾಡುವುದಿಲ್ಲವಾಗಿ ಹೇಳಿದೆ; ಇರಾಣ್ ಹಿಂದೆ ಸರಿದಿದೆ. ಮುಸ್ಲಿಂ ದೇಶಗಳೆಲ್ಲ 'ಜಿಹಾದ್' ಹೆಸರಿನಲ್ಲಿ ಸಂಘಟಿತವಾಗುವ ಸಂಭವ ಹೆಚ್ಚುತ್ತಿದೆ. ಈ ಯುದ್ಧವು ಭಯೋತ್ಪಾದಕತೆಯ ವಿರುದ್ಧವೇ ಹೊರತು ಇಸ್ಲಾಂ ವಿರುದ್ಧವಲ್ಲವೆಂದು ಅಮೇರಿಕಾ ಹೇಳುತ್ತಿದ್ದರೂ ವಾಸ್ತವವಾಗಿ ಅದು ಇಸ್ಲಾಂ ವಿರುದ್ಧದ ಯುದ್ಧವೆಂದೇ ಅನೇಕ ಮುಸ್ಲಿಂ ದೇಶಗಳು ಭಾವಿಸುವ ಸಾಧ್ಯತೆಯಿದೆ.

ಅಮೇರಿಕಾ ಸಾರಿರುವ ಯುದ್ಧಕ್ಕೆ ಈಗ ಮುಖ್ಯ ಗುರಿ ಉಸ್ಮಾನ್ ಬಿನ್ ಲಾಡೇನ್ ಮತ್ತು ಉಳಿದ ಭಯೋತ್ಪಾದಕರೆಂದು ಅದು ಹೇಳುತ್ತಿದೆ. ಆದರೆ ಲಾಡೇನ್ ದೋಷಿಯೆಂಬುದು ಸಿದ್ಧವಾಗಿಲ್ಲದೇ ಇರುವುದರಿಂದಲೂ ಮತ್ತು ಭಯೋತ್ಪಾದನೆ ಸುಮಾರು ೬೦ ದೇಶಗಳಲ್ಲಿ ವ್ಯಾಪಿಸಿರುವುದರಿಂದಲೂ ಅಮೇರಿಕಾದಿಂದ ಘೋಷಿತವಾದ ಈ ಯುದ್ಧ ಯಾವ ಯಾವ ಸ್ವರೂಪತಾಳುತ್ತದೆಂದು ಹೇಳಲು ಸಾಧ್ಯವಿಲ್ಲ. ಆದರೆ ಅಮೇರಿಕಾ ಮಾತ್ರ ತನ್ನ ಮೇಲೆ ಆದ ದಾಳಿಯ ಪ್ರತೀಕಾರವನ್ನು ತೀರಸದೇ ಇರದು.

ರಾಜ್ಯಶಕ್ತಿ ಮತ್ತು ಧರ್ಮಗಳ ಸಂಯೋಜನೆ ಭಯೋತ್ಪಾದಕತೆಗೆ ಮೂಲಕಾರಣವಾಗಿದೆ. ಇಂದಿಗೂ, ಒಂದು ಕೈಯಲ್ಲಿ ಬೈಬಲ್ ಇಲ್ಲವೆ ಕುರಾಣ್, ಇಲ್ಲವೆ ಗ್ರಂಥಸಾಹಿಬ್ ಇಲ್ಲವೆ ಗೀತೆ, ಇನ್ನೊಂದು ಕೈಯಲ್ಲಿ ಖಡ್ಗದ ಉದಾಹರಣೆ ನಮಗೆ ಸಿಗುತ್ತವೆ. ಕೆಲವು ದೇಶಗಳಂತೂ ತಾವು ಇಂಥದೇ ಧರ್ಮಕ್ಕೆ ಸೇರಿದ ದೇಶಗಳೆಂದು ಘೋಷಿಸಿಕೊಂಡಿವೆ ಮತ್ತು ಅಲ್ಲಿ ಬೇರೆ ಧರ್ಮದ ಅನುಯಾಯಿಗಳು ಎರಡನೇ – ಮೂರನೇ ದರ್ಜೆಯ ಪ್ರಜೆಗಳಾಗಿರುತ್ತಾರೆ. ಇದೇ ಧರ್ಮಗಳ ಹೆಸರಿನಲ್ಲಿ ಇಸ್ರೇಲ್ ಮತ್ತು ಪ್ಯಾಲೆಸ್ಟೈನ್ ದೇಶಗಳ ಮಧ್ಯೆ ೧೯೪೭ ನೇ ಇಸ್ವಿಯಿಂದಲೂ ಹೋರಾಟ ನಡೆಯುತ್ತಲೇ ಇದೆ. ಭಾರತದ ಇಭ್ಭಾಗವಾದದ್ದು ಧರ್ಮದ ಕಾರಣದಿಂದಾಗಿಯೇ. ಟಿಬೆಟಿನಿಂದ ದಲೆಯಲಾಮಾ ಭಾರತಕ್ಕೆ ಓಡಿ ಬಂದದ್ದು ಧರ್ಮದ ಕಾರಣದಿಂದಲೇ. ಇಂಥ ಉದಾಹರಣೆಗಳು ನೂರಾರು ಇವೆ. ಹೀಗೆ ರಾಜ್ಯಶಕ್ತಿ ಮತ್ತು ಧರ್ಮಗಳ ವಿವಾಹದ ಫಲಶ್ರುತಿಯಾಗಿ ಜನ್ಮತಾಳಿದ ಭಯೋತ್ಪಾದಕತೆಯನ್ನು ಕಾನೂನು ಬಾಹೀರ ಎಂದು ಹೇಳುವುದು ಇಂದು ದುಸ್ತರವಾಗಿದೆ. ಕಾಶ್ಮೀರದ ವಿಚಾರದಲ್ಲಿ ಪಾಕಿಸ್ತಾನ ನಡೆಸುತ್ತಿರುವ ಭಯೋತ್ಪಾದಕತೆಯನ್ನು "ಸ್ವಾತಂತ್ರ್ಯದ ಸಮರ", "ಜಿಹಾದ್" ಇತ್ಯಾದಿಯಾಗಿ ಕರೆಯುತ್ತಿದೆ. ಬಾಬರಿ ಮಸೀದಿ ವಿನಾಶದ ಹಿಂದಿರುವ ಭಯೋತ್ಪಾದಕತೆಯನ್ನು ಹಿಂದೂ ಧರ್ಮದ ಪುನರುತ್ಥಾನ ಎಂದು ಕರೆಯಲಾಗುತ್ತಿದೆ. ಆದ್ದರಿಂದ ಇಂದು ಇಡೀ ವಿಶ್ವ ತನ್ನ ಧರ್ಮಾಂಧತೆಯ ಮೂರ್ಖತನದ ಪಾಪವನ್ನು ಭಯೋತ್ಪಾದಕತೆಯ ಮೂಲಕ ಅನುಭವಿಸುತ್ತಿದೆ.

ಎಲ್ಲಿಯವರೆಗೆ ಧರ್ಮಗಳನ್ನು ರಾಜ್ಯ ಶಕ್ತಿಯ ಜೊತೆಗೆ ಸೇರಿಸುವುದನ್ನು ನಿಲ್ಲಿಸುವುದಿಲ್ಲವೋ ಅಲ್ಲಿಯ ವರೆಗೆ ಈ ವಿಶ್ವವು ಭಯೋತ್ಪಾದಕತೆಯ ಸುಳಿಯಲ್ಲಿ ಸಿಕ್ಕಿ ನಲಗುತ್ತಲೇ ಇರುತ್ತದೆ.

ಈ ಸಮಸ್ಯೆಯ ಪರಿಹಾರಕ್ಕೆ ಮಾರಣಹೋಮ ಉಪಾಯವಾಗಲಾರದು.

೩೨ ನೇ ಪುಟ ನೋಡಿ

ಕಾಲುಗಳ ಶಕ್ತಿಯ ಸದುಪಯೋಗದ ಒಂದು ಪ್ರಯೋಗ

— ಕ್ರಿಸ್ ಪೋಪ್

ಸೈಕಲ್ ರಿಕ್ಷಾ! ಇದು ಒಂದು ಕಾಲಕ್ಕೆ ಏಶಿಯಾದ, ಹಾಗೆಯೇ ಭಾರತದ ಜನಜೀವನದ ಒಂದು ಅಂಗವಾಗಿತ್ತು. ಆದರೆ ೨೦ ನೇ ಶತಮಾನದ ಕೊನೆಯ ಭಾಗದಲ್ಲಿ ಅದು ರಸ್ತೆಯಂಚಿನಲ್ಲಿಯೇ ಉಳಿದುಬಿಟ್ಟಿತು. ನಾವು ಪಶ್ಚಿಮದ ಔದ್ಯೋಗಿಕರಣದ ಜೊತೆ ಸೇರುವ ಭರದಲ್ಲಿ ಅದನ್ನು ತ್ಯಜಿಸಿದೆವು ಮತ್ತು ಮೋಟಾರನ್ನು ಸ್ವೀಕರಿಸಿದೆವು. ಆದರೆ ಇತ್ತೀಚೆಗೆ ಸೈಕಲ್ ರಿಕ್ಷಾವನ್ನು ಆಧುನಿಕಗೊಳಿಸಲಾಗಿದೆ. ಅದು ಈ ಶತಮಾನದಲ್ಲಿ ಅಳಿಯದೇ ಉಳಿಯುವ ಸಾಧ್ಯತೆ ಇದೆ.

ಪರಂಪರಾಗತ ಸೈಕಲ್ ರಿಕ್ಷಾಗಳು ೧೯೪೦ ರ ದಶಕದಿಂದ ಅಸ್ತಿತ್ವದಲ್ಲಿವೆ. ಈ ರಿಕ್ಷಾಗಳು ರಸ್ತೆಗೆ ಬರುವ ಮುನ್ನ ಮರದ ಕೈಗಾಡಿಗಳು ಓಡಾಡುತ್ತಿದ್ದವು. ನಂತರ ಅವುಗಳ ಸ್ಥಾನವನ್ನು ಈ ರಿಕ್ಷಾ ಆಕ್ರಮಿಸಿದವು. ಮರದ ಕೆಲ ಕೈಗಾಡಿಗಳನ್ನು ಕೊಲಕೊತಾದಲ್ಲಿ ಈಗಲೂ ನೋಡಬಹುದು. ಇಂದು ಸೈಕಲ್ ರಿಕ್ಷಾಗಳು ಅನೇಕಾನೇಕ ಸ್ವರೂಪಗಳಲ್ಲಿ ಬರುತ್ತಿವೆ. ಇನ್ನು ಕೆಲವು ನಿರ್ದಿಷ್ಟ ಉಪಯೋಗಕ್ಕಾಗಿಯೇ ರಚಿಸಲ್ಪಟ್ಟಿವೆ.

ರಿಕ್ಷಾಗಳ ಬಗ್ಗೆ ಸಾಮಾನ್ಯ ದೂರು ಏನೆಂದರೆ ಅವು ಅಷ್ಟೊಂದು ದಕ್ಷತೆಯಿಂದ ಕೂಡಿಲ್ಲ ಮತ್ತು ಸುಖಾಸೀನವಾಗಿಲ್ಲ. ಈ ವಾಹನವನ್ನು ಮೊದಲು ಬಹಳ ಒರಟಾಗಿ ತಯಾರಿಸುತ್ತಿದ್ದರು. ಒರಟಾದ ರಸ್ತೆಗಳ ಮೇಲೆ ಓಡುವಾಗ ಎತ್ತಿ ಎತ್ತಿ ಹಾಕುತ್ತಿದ್ದವು. ಸೀಟಿನ ಗುಣಮಟ್ಟ ಬಹಳ ಕಳಪೆಯದಾಗಿರುತ್ತಿತ್ತು. ಇಡೀ ರಚನೆಯನ್ನೇ ಎರಡು ಅಥವಾ ಮೂರು ವರ್ಷಗಳಿಗೊಮ್ಮೆ ರಿಪೇರಿ ಮಾಡಬೇಕಾಗುತ್ತಿತ್ತು. ಸೈಕಲ್ ಸ್ವತಃ ಬಹಳ ಭಾರವಾಗಿರುತ್ತಿತ್ತು; ಗೇರ್ ವ್ಯವಸ್ಥೆ ಇರಲಿಲ್ಲ. ಇದರಿಂದಾಗಿ ರಿಕ್ಷಾ ಓಡಿಸುವವನೇ ಗೇರ್ ಆಗಿ ಕೆಲಸ ಮಾಡಬೇಕಾಗುತ್ತಿತ್ತು. ಆದ್ದರಿಂದ ಅವನಿಗೆ ಬಹಳ ಆಯಾಸವಾಗುತ್ತಿತ್ತು.

ರಿಕ್ಷಾಗಳ ಸಂಖ್ಯೆ ಅಷ್ಟೇ ಇದ್ದರೂ ಗ್ರಾಹಕರ ಸಂಖ್ಯೆ ಮಾತ್ರ ಕಡಿಮೆ ಆಗಹತ್ತಿತ್ತು. ಗ್ರಾಹಕರ ಸಂಖ್ಯೆಯ ಇಳಿಮುಖಕ್ಕೆ ಕಾರಣವೇನೆಂಬುದನ್ನು ಅಮೇರಿಕದ ನ್ಯೂಯಾರ್ಕ್ ನಗರದಲ್ಲಿರುವ ಆಯ್.ಟಿ.ಡಿ.ಪಿ. (ಇನ್‌ಸ್ಟಿ

ಟ್ಯೂಟ್ ಫಾರ್ ಟ್ರಾನ್ಸ್‌ಪೋರ್ಟೇಶನ್ ಎಂಡ್ ಡೆವೆಲಪ್‌ಮೆಂಟ್ ಪ್ಲಾನಿಂಗ್) ಎಂಬ ಸಂಸ್ಥೆಯು ಕಂಡುಹಿಡಿಯಿತು. ಈ ಸಂಸ್ಥೆಯು ಮೋಟಾರು ರಹಿತ ವಾಹನಗಳ ಅನುಕೂಲತೆಗಳನ್ನು ಪ್ರೋತ್ಸಾಹಿಸುತ್ತದೆ. ಆಯ್.ಟಿ.ಡಿ.ಪಿ. ಯು ಹಿಂದುಳಿದ ದೇಶಗಳಿಗೆ ಬೈಸಿಕಲ್‌ಗಳನ್ನು ಪೂರೈಸುತ್ತದೆ ಮತ್ತು ಮಾನವ ಚಾಲಿತ ಯಂತ್ರಗಳು ಕೀಳುಮಟ್ಟದವು ಎಂಬ ಕಲ್ಪನೆಯನ್ನು ದೂರ ಮಾಡಲು ಸಹಾಯ ಮಾಡುತ್ತದೆ. ಈ ಕೇಂದ್ರವು ಹೊಸ ವಾಹನಗಳನ್ನು ಅಭಿವೃದ್ಧಿ ಪಡಿಸುವಲ್ಲಿ ತಾಂತ್ರಿಕ ಜ್ಞಾನವನ್ನು ಕೊಡುತ್ತದೆ: ಸರ್ಕಾರಗಳ ಸಾರಿಗೆ ನೀತಿಗಳನ್ನು ರೂಪಿಸುವಲ್ಲಿಯೂ ಸಹ ಸಹಾಯಮಾಡುತ್ತದೆ.

ಆಗ್ರಾದಲ್ಲಿರುವ ತಾಜಮಹಲ್ ಮೇಲೆ ಪರಿಸರ ಮಾಲಿನ್ಯದ ಪರಿಣಾಮವನ್ನು ತಪ್ಪಿಸುವ ಉದ್ದೇಶ್ಯದಿಂದ ಸರ್ವೋನ್ನತ ನ್ಯಾಯಾಲಯವು ೧೯೯೪ರಲ್ಲಿ ತಾಜಮಹಲ್ ಸುತ್ತ ನಾಲ್ಕು ಕಿಲೋಮೀಟರ್ ಪ್ರದೇಶದಲ್ಲಿ ಮೋಟಾರ್ ಚಾಲಿತ ವಾಹನಗಳ ಸಂಚಾರವನ್ನು ನಿಷೇಧಿಸಿತು. ಅಲ್ಲದೆ ಅಲ್ಲಿಯ ರಸ್ತೆಗಳು ಬಹಳ ಕಿರಿದಾಗಿಯೂ ಮತ್ತು ಅಂಕುಡೊಂಕಾಗಿಯೂ ಇರುವುದರಿಂದ ಬಸ್‌ಗಳ ಓಡಾಟಕ್ಕೆ ಸೂಕ್ತವಾಗಿಲ್ಲ. ಅವು ಪಾದಚಾರಿಗಳಿಗೆ ಮತ್ತು ರಿಕ್ಷಾಗಳಿಗೆ ಮಾತ್ರ ಅನಕೂಲವಾಗಿವೆ.

ಈ ರಸ್ತೆಗಳ ಪರಿಸ್ಥಿತಿಯು ಮಾನವ ಚಾಲಿತ ವಾಹನಗಳಿಗೇ ಸರಿ ಎಂಬ ವಿಚಾರಕ್ಕೆ ದಾರಿಮಾಡಿಕೊಟ್ಟಿತು. ಆದ್ದರಿಂದ ಆಯ್.ಟಿ.ಡಿ.ಪಿ.ಯು ಭಾರತೀಯ ಸೈಕಲ್ ರಿಕ್ಷಾಗಳ ಅಭಿವೃದ್ಧಿ ಯೋಜನೆಯನ್ನು ಕೈಗೊಂಡಿತು. ಕಾರುಗಳ ಜೊತೆ ಸ್ಪರ್ಧಿಸಲು ಸಾಧ್ಯವಾಗಬಹುದಾದ ರೀತಿಯಲ್ಲಿ ರಿಕ್ಷಾಗಳನ್ನು ಅಭಿವೃದ್ಧಿ ಪಡಿಸಬೇಕೆಂಬದು ಈ ಯೋಜನೆಯ ಹಿಂದೆ ಇದ್ದ ವಿಚಾರವಾಗಿತ್ತು. ಮೂರು ವರ್ಷಗಳ ಕಾಲ ಈ ಸಂಸ್ಥೆ ಚಾಲಕರು, ಪ್ರಯಾಣಿಕರು, ಸ್ಥಳೀಯ ಉತ್ಪಾದಕರು, ಬಿಡಿ ಭಾಗಗಳ ಜೋಡಣೆದಾರರು ಮತ್ತು ಪ್ರವಾಸೋದ್ಯಮದ ಅಧಿಕಾರಿಗಳನ್ನೆಲ್ಲ ಸೇರಿಸಿ ೨೧ ನೇ ಶತಮಾನಕ್ಕೆ ಯೋಗ್ಯವಾದ ಸೈಕಲ್ ರಿಕ್ಷಾ ತಯಾರಿಸಲು ಶ್ರಮಿಸಿತು. ಇವರೆಲ್ಲರ ಪ್ರಯತ್ನಗಳ ಫಲವಾಗಿ ಶೇಕಾಡ ಮೂವತ್ತೂಕ್ಕು ಕಡಿಮೆ ಭಾರದ ರಿಕ್ಷಾ ತಯಾರಾಗಿವೆ. "ಇದರಿಂದಾಗಿ ರಿಕ್ಷಾ ತುಳಿಯುವವನ ಕೆಲಸ ಹೆಚ್ಚು ಸುಲಭವಾಗಿದೆ" ಎಂದು ಹೇಳುತ್ತಾರೆ ಅದರ ವಿನ್ಯಾಸಕ ಜಿ. ಶ್ಯಾಮ್. ಸೈಕಲ್ಲಿನ ಗುರುತ್ವಾಕರ್ಷಣ ಕೇಂದ್ರವನ್ನು ಮೂರನೇ ಒಂದು ಭಾಗದಷ್ಟು ಕೆಳಗಿಳಿಸಲಾಗಿದೆ. ಆದ್ದರಿಂದ ಅದರ ಭದ್ರತೆ ಹೆಚ್ಚಾಗಿದೆ. ಅಲ್ಲದೆ, ಬಹುವಿಧ ಗೇರ್ ಪದ್ಧತಿಯನ್ನೂ ಅಳವಡಿಸಲಾಗಿದೆ.

ಕನಿಷ್ಟ ಹತ್ತು ವರ್ಷಗಳಾದರೂ ಬಾಳಿಕೆ ಬರುವಂತಾಗಿದೆ. ಇಷ್ಟೆಲ್ಲ ಸುಧಾರಣೆ ಆಗಿದ್ದರೂ ಸಹ ರಿಕ್ಷಾದ ಬೆಲೆ ಆಶ್ಚರ್ಯವಾಗುವಷ್ಟು ಕಡಿಮೆಯೇ ಇದೆ : ಕೇವಲ [illegible],೫೦೦ ರೂಪಾಯಿಗಳಿಂದ ೪೦೦೦ ರೂಪಾಯಿ. ಹಳೇ ರಿಕ್ಷಾದ ಬೆಲೆಯೂ ಅಷ್ಟೇ ಇತ್ತು. ಈ ರಿಕ್ಷಾ ಆಧುನಿಕವಾಗಿದೆ, ಆದರೆ ಸಂಕೀರ್ಣವಾಗಿಲ್ಲ; ಅತಿ ತಾಂತ್ರಿಕತೆಯಿಂದ ಕೂಡಿಲ್ಲ ಮತ್ತು ಸಾಮಾನ್ಯ ಜನರ ಎಟುಕಿಗೆ ಮೀರಿಲ್ಲ. ಸ್ಥಳೀಯ ಕೈಗಾರಿಕೊದ್ಯಮದ ಭಾಗವಾಗಿಯೇ ಉಳಿದಿದೆ ಮತ್ತು ಅನೇಕ ರೀತಿ ಸ್ಥಳೀಯ ಉದ್ಯೋಗವಕಾಶಗಳ ಸೃಷ್ಟಿಗೆ ಕಾರಣವಾಗಿದೆ.

ಈ ಯೋಜನೆ ಆಗ್ರಾದಲ್ಲಿ ಪ್ರಾರಂಭವಾಯಿತು. ಈಗ ಇವುಗಳ ಸಂಖ್ಯೆ ೧,೦೦೦ಕ್ಕೆ ಏರಿದೆ. ಅಲ್ಲದೆ, ಮಥುರಾ, ವೃಂದಾವನ, ಭರತಪುರ, ಲಖನೌ, ಚಂಡೀಘಡನಂಥ ನಗರಗಳಲ್ಲಿಯೂ ಈ ರಿಕ್ಷಾಗಳು ಜನಪ್ರಿಯವಾಗಿವೆ. ಇದರ ಉತ್ಪಾದನೆ ಈಗ ಸಂಪೂರ್ಣವಾಗಿ ಸ್ಥಳೀಯರ ಉದ್ಯಮಶೀಲತೆಗೇ ಒಳಪಟ್ಟಿದೆ. ದಿಲ್ಲಿಯಲ್ಲಿಯೂ ಇವುಗಳ ಸಂಖ್ಯೆ ಈಗ ೨೫೦ ಇದೆ. ಅಲ್ಲಿಯ ಚಾಲಕರು, ಪ್ರಯಾಣಿಕರು ಇವುಗಳನ್ನು ಮೆಚ್ಚುಗೆಯಿಂದ ಸ್ವಾಗತಿಸಿದ್ದಾರೆ. ಉತ್ಪಾದಕರೂ ಸಹ ಆಸಕ್ತಿವಹಿಸಿದ್ದಾರೆ. ಈಗ ದಿಲ್ಲಿಯಲ್ಲಿ ಸಿಎನ್‌ಜಿ-ರಹಿತ ಇಂಧನದ ಬಸ್‌ಗಳಿಗೆ ನಿಷೇಧವಿರುವುದರಿಂದ ಈ ರಿಕ್ಷಾಗಳಿಗೆ ಬೇಡಿಕೆ ಹೆಚ್ಚಾಗುವ ಸಂಭವವಿದೆ.

ಸರ್ಕಾರದ ಸಹಾಯವೂ ದೊರೆಯುತ್ತಿದೆ. ಆಗ್ರಾದಲ್ಲಿ ಸಾಲ ಯೋಜನೆಯನ್ನು ಜಾರಿಗೆ ತರಲಾಗಿದೆ. ಆ ಸಾಲಕ್ಕೆ ೧೫ ರಿಂದ ೫೦ ಭಾಗ ಸೋಡಿ ಇದೆ; ಬಡ್ಡಿಯೂ ಕಡಿಮೆ. ಇಲ್ಲಿ ತೊಂದರೆಯಿರುವುದು ಸರ್ಕಾರಿ ನೌಕರರ ಅನಾಸಕ್ತಿ. ದಿಲ್ಲಿಯ ಮುಖ್ಯಮಂತ್ರಿ ಶ್ರೀಮತಿ ಶೀಲಾ ದೀಕ್ಷಿತ ಈ ಸೈಕಲ್ ರಿಕ್ಷಾಗಳ ಬಗ್ಗೆ ಹೀಗೆ ಹೇಳಿದ್ದಾರೆ, "ಇವು ಬಹಳ ಆಕರ್ಷಕವೂ, ಸುಂದರವೂ ಆಗಿರುವುದರಿಂದ ಇವುಗಳು ಯಶಸ್ವಿಯಾಗುವಲ್ಲಿ ಯಾವ ಸಂದೇಹವೂ ಇಲ್ಲ."

ಅಭಿವೃದ್ಧಿಶೀಲ ದೇಶಗಳು ಯಾತಾಯಾತದ ಸಮಸ್ಯೆಯನ್ನೂ ಮತ್ತು ಪರಿಸರ ಮಾಲಿನ್ಯದ ಸಮಸ್ಯೆಯನ್ನೂ ಎದುರಿಸುತ್ತಿರುವಾಗ ಈ ಮಾನವಶಕ್ತಿ ಚಾಲಿತ ವಾಹನಗಳಿಗೆ ಸಾರಿಗೆ ವ್ಯವಸ್ಥೆಯಲ್ಲಿ ಮಹತ್ವದ ಪಾತ್ರವಿದೆ. ಸೈಕಲ್ ರಿಕ್ಷಾಗಳು ಬದುಕಿ ಬಾಳಲು ಬಂದಿರುವಂತೆ ತೋರುತ್ತದೆ. ★

("ಪ್ರೊಫೆಶಿನಲ್ ಇಂಜಿನೀಯರಿಂಗ್" ಸಾಭಾರ : ಅನು : ಸು.ಕೌ)

ರೈತರಿಗಾಗಿ ಸ್ವಾವಲಂಬಿತ ವಿದ್ಯುತ್‌ಶಕ್ತಿ!

-ಚಂದ್ರಕಾಂತ ಪಾತಕ

ಇಂದು ಪ್ರಪಂಚದ ಎದುರಿನಲ್ಲಿ ಶಕ್ತಿಯ ಸಮಸ್ಯೆ ಒಂದು ಮಹತ್ವ ಪೂರ್ಣ ಪ್ರಶ್ನೆಯಾಗಿದೆ. ಅಡಿಗೆ, ಯಾತಾಯಾತ, ಉತ್ಪಾದನೆ, ಉದ್ಯೋಗ ಮುಂತಾದವುಗಳಿಗೆ ಶಕ್ತಿಯ ಸರಬರಾಜಿನ ಸಮಸ್ಯೆ ಗಂಭೀರ ರೂಪವನ್ನು ತಾಳುತ್ತಾ ಹೋಗುತ್ತಿದೆ. ಭೂಗರ್ಭದಲ್ಲಿಯ ಜನಿಜ ಎಣ್ಣೆ, ಕಲ್ಲಿದ್ದಲು ಮುಂತಾದವುಗಳ ಸಂಗ್ರಹ ಸೀಮಿತವಾಗಿದೆ. ಆದ್ದರಿಂದ ಅವುಗಳ ಕೊರತೆ ಈಗ ಅನುಭವಕ್ಕೆ ಬರುತ್ತಿದೆ.

ಈ ಸಮಸ್ಯೆಯ ಪರಿಹಾರಕ್ಕಾಗಿ ಮನುಷ್ಯ ಪುನಃ ಪಂಚಮಹಾಭೂತಗಳ ಕಡೆಗೆ ನೋಡುತ್ತಿದ್ದಾನೆ. ಸೌರಶಕ್ತಿ ಮತ್ತು ಪವನಶಕ್ತಿಗಳ ಉಪಯೋಗವನ್ನು ಮಾಡುವ ಬಗ್ಗೆ ಅನೇಕ ಪ್ರಕಾರದ ಪ್ರಯೋಗಗಳು ಅನೇಕ ದೇಶಗಳಲ್ಲಿ ನಡೆಯುತ್ತಿವೆ. ಅದಕ್ಕಾಗಿ ವಿವಿಧ ಪ್ರಕಾರದ ತಂತ್ರ ಮತ್ತು ಯಂತ್ರ ಪೇಟೆಗೆ ಬರುತ್ತಿವೆ. ನಮ್ಮ ದೇಶದಲ್ಲಿ ಮಾನವ ಮತ್ತು ದನಗಳ ಬಹಳ ದೊಡ್ಡ ಶಕ್ತಿ ಈ ಉದ್ದೇಶ್ಯಕ್ಕಾಗಿ ದೊರೆಯುತ್ತದೆ. ಈ ಬಗ್ಗೆಯೂ ವಿಚಾರ ನಡೆಯಬೇಕು, ಪ್ರಯೋಗ ನಡೆಯಬೇಕು.

ಸಾಮಾನ್ಯ ರೈತರಿಗೆ ಮೂರು ಕೆಲಸಗಳಿಗಾಗಿ ಶಕ್ತಿಯ ಅಗತ್ಯವಿರುತ್ತದೆ. ೧. ವಿದ್ಯುತ್‌ಶಕ್ತಿ ೨. ಚಿಕ್ಕ ಗ್ರಾಮೋದ್ಯೋಗಗಳು ೩. ಅಡಿಗೆ. ನಮ್ಮ ದೇಶದಲ್ಲಿ ಸುಮಾರು ಎಂಟು ಕೋಟಿ ಎತ್ತುಗಳು, ಒಂದು ಕೋಟಿ ಎಮ್ಮೆಗಳಿವೆ. ಅವುಗಳಿಂದ ಮೂವತ್ತೆರಡು ಸಾವಿರ ಕಿಲೋವ್ಯಾಟ್ ಶಕ್ತಿ ದೊರೆಯಲು ಸಾಧ್ಯವಿದೆ. ಇದರ ಜೊತೆಗೆ ಶೇಕಡಾ ೬೫ ರಿಂದ ೭೦ ರಷ್ಟು ಭೂಮಿಯಲ್ಲಿ ವ್ಯವಸಾಯ ಮಾಡಲು ಸಾಧ್ಯವಿದೆ. ಎತ್ತಿನ ಶಕ್ತಿ ಹಳ್ಳಿಯ ಬದುಕಿನಲ್ಲಿ ಬೆನ್ನುಮೂಳೆಯಾಗಿದೆ. ಎತ್ತಿನ ಶಕ್ತಿಯಿಂದ ನಡೆಯುವಂಥ ಚಿಕ್ಕ ಚಿಕ್ಕ ಯಂತ್ರಗಳನ್ನು ನಾವು ರಚಿಸಿದರೆ ಎತ್ತುಗಳಿಗೆ ಅವುಗಳ ಬಿಡುವಿನ ಸಮಯದಲ್ಲಿ ಕೆಲಸ ಕೊಡಲು ಸಾಧ್ಯವಿದೆ. ಈ ಮಾತನ್ನು ಗಮನದಲ್ಲಿಟ್ಟುಕೊಂಡು ಎತ್ತುಗಳ ಬಲದಿಂದ ನಡೆಯುವ ಒಂದು ಹೊಸ ವಿದ್ಯುತ್ ಉತ್ಪಾದನಾ ಯಂತ್ರವನ್ನು ರಚಿಸಿದ್ದೇನೆ. ಈ ಯಂತ್ರವನ್ನು ಒಂದು ಸ್ಥಳದಲ್ಲಿಟ್ಟು ಎತ್ತುಗಳ ಸಹಾಯದಿಂದ ಕೆ.ವಿ.ಎ.ಯ ಜನರೇಟರ್ ನಡೆಸುವುದು, ಡೈನೋಮೋ ನಡೆಸಿ ಬ್ಯಾಟರಿ ಚಾರ್ಜಿಂಗ್ ಮಾಡುವುದು, ಎಣ್ಣೆಗಾಣ ನಡೆಸುವುದು, ಕಡ್ಲೆಕಾಯಿ ಅಥವಾ ಭತ್ತದ ಸಿಪ್ಪೆ ತೆಗೆ

ಯುವ ಯಂತ್ರವನ್ನು ನಡೆಸುವುದು, ಕಾಳು ಅಥವಾ ಮಸಾಲೆ ಪದಾರ್ಥಗಳನ್ನು ಬೀಸುವ ಯಂತ್ರವನ್ನು ನಡೆಸುವುದು, ಏರ್ ಕಾಂಪ್ರೆಸರ್ ನಡೆಸುವುದು ಇತ್ಯಾದಿ ಕೆಲಸಗಳನ್ನು ಮಾಡಬಹುದು. ಏರ್ ಕಾಂಪ್ರೆಸರ್ ಜೊತೆಗೆ ಸೆಂಟ್ರಿ ಫ್ಯೂಗಲ್ ನೀರಿನ ಪಂಪನ್ನು ಸೇರಿಸಿ ಹನಿ ನೀರಾವರಿ ವ್ಯವಸ್ಥೆಯನ್ನು ಕೂಡ ಮಾಡಬಹುದು. ಹೀಗೆ ವಿದ್ಯುತ್‌ನ ಅಭಾವವಿದ್ದರೂ ಸಹ ವ್ಯವಸಾಯ ಮತ್ತು ಇತರ ಅನೇಕ ಕೆಲಸಗಳನ್ನು ಮಾಡಬಹುದಾಗಿದೆ.

ಹಳ್ಳಿಯ ಜೀವನದಲ್ಲಿ ಎತ್ತಿನಗಾಡಿ ಒಂದು ಮುಖ್ಯ ಭಾಗವಾಗಿದೆ. ಅದರ ಉಪಯೋಗವನ್ನು ಯಾತಾಯಾತವಲ್ಲದೆ ಉದ್ಯೋಗಗಳ ಕೆಲಸಕ್ಕೂ ಉಪ ಯೋಗಿಸಬಹುದು. ಆದಕ್ಕಾಗಿ ಎತ್ತಿನಗಾಡಿಯ ಒಂದು ಕಡೆಗೆ 'ವ್ಹಿ' ಪುಲಿ ಸೇರಿಸಿ ಚಕ್ರದ ಮೇಲಿಂದ ಬೆಲ್ಟ್ ಮೂಲಕ ಎತ್ತಿನ ಗಾಡಿಯಲ್ಲಿಟ್ಟಿರುವ ಯಂತ್ರಕ್ಕೆ ವೇಗವನ್ನು ತರಲು ಸಾಧ್ಯವಿದೆ ಮತ್ತು ಮೇಲೆ ತಿಳಿಸಲಾದ ಎಲ್ಲ ಕೆಲಸಗಳನ್ನು ಮಾಡಬಹುದಾಗಿದೆ.

ಎತ್ತಿನಗಾಡಿಯ ಚಕ್ರ ಒಂದು ನಿಮಿಷದಲ್ಲಿ ಸುಮಾರು ಮೂವತ್ತು ಸಲ ಸುತ್ತುತ್ತದೆ ಎಂದು ಭಾವಿಸಿದರೆ ಪುಲಿ ಜೋಡಿಸಿ ಡೈನೋಮೋ ಅಲ್ಟರ್ ನೇಟನ್ನು ಮೂರುಸಾವಿರ ಸಲ ತಿರುಗಿಸಬಹುದು. ಇದರಿಂದ ಎತ್ತಿನಗಾಡಿ ಚಲನೆಯಲ್ಲಿದ್ದರೂ ಬ್ಯಾಟರಿ ಚಾರ್ಜಿಂಗ್ ಆಗುತ್ತದೆ. ಈ ರೀತಿ ತುಂಬಿದ ಬ್ಯಾಟರಿಗೆ ಎರಡು ತಂತಿಗಳನ್ನು ಜೋಡಿಸಿ ಮನೆಯಲ್ಲಿ ಟಿ. ವ್ಹಿ., ಟೇಪ್ ರೆಕಾರ್ಡರ್, ಪಂಖಾ ನಡೆಸಬಹುದು ಅಥವಾ ಹನ್ನೆರಡು ವಾಲ್ಟಿನ ಎರಡು ದೀಪಗಳನ್ನು ಉರಿಸಬಹುದು. ಈ ಪ್ರಕಾರ ಎತ್ತು ಮತ್ತು ಎತ್ತಿನ ಗಾಡಿಯ ಉಪಯೋಗ ಮಾಡಿ ನಾವು ಹಳ್ಳಿಗಳಲ್ಲಿ ಚಿಕ್ಕ ಪ್ರಮಾಣದಲ್ಲಿ ವಿದ್ಯುತ್ತನ್ನು ಉತ್ಪಾದಿಸಬಹುದು ಮತ್ತು ಚಿಕ್ಕ ಯಂತ್ರಗಳನ್ನೂ ನಡೆಸಬಹುದು.

ದನಗಳಿಂದ ನಮಗೆ ಸುಮಾರು ಎರಡು ಸಾವಿರ ಕೋಟಿ ರೂಪಾಯಿಗಳ ಬೆಲೆಯ ಹತ್ತು ಕೋಟಿ ಟನ್ ಗೊಬ್ಬರ ಸಿಗುತ್ತದೆ. ಗೋಬರ್ ಗ್ಯಾಸ್ ಸ್ಥಾವರದಿಂದ ಅಡಿಗೆಗಾಗಿ ಅನಿಲರೂಪದ ಶಕ್ತಿಯನ್ನು ಪಡೆಯಬಹುದು. ಇದ ರಿಂದ ಸುಮಾರು ೫೦ ಲಕ್ಷ ಟನ್ ಸೌದೆಯನ್ನು ಉಳಿಸಬಹುದು. ಉಳಿದ ಬಗಡದಿಂದ ಉತ್ತಮ ಗೊಬ್ಬರವಾಗುತ್ತದೆ. ಇದಲ್ಲದೆ ದನಗಳು ಸತ್ತುಹೋದ ಮೇಲೆ ಅವುಗಳ ಚರ್ಮ, ಮೂಳೆ, ಕೊಂಬು, ಮಾಂಸ ಇತ್ಯಾದಿಗಳಿಂದ ವಿವಿಧ ಪದಾರ್ಥಗಳನ್ನು ತಯಾರಿಸಲು ಅಥವಾ ಗೊಬ್ಬರ ತಯಾರಿಸಲು ಸಾಧ್ಯವಿದೆ.

ವ್ಯವಸಾಯಕ್ಕಾಗಿ ಮತ್ತು ಯಾತಾಯಾತಕ್ಕಾಗಿ ಖನಿಜ ಎಣ್ಣೆ ಮತ್ತು

ಕಲ್ಲಿದ್ದಲಿನ ಉಪಯೋಗ ಹೆಚ್ಚಿದ್ದರಿಂದ ಎತ್ತುಗಳ ಸಂಖ್ಯೆ ಶೀಘ್ರವಾಗಿ ಕಡಿಮೆಯಾಗುತ್ತಿದೆ. ಹನ್ನೊಂದು ಎತ್ತುಗಳ ಶಕ್ತಿಗೆ ಒಂದು ಟ್ರ್ಯಾಕ್ಟರ್ ಸಮಾನವೆಂದು ನಾವು ಭಾವಿಸಿದರೆ ಎಂಭತ್ತು ಲಕ್ಷ ಟ್ರ್ಯಾಕ್ಟರುಗಳ ಕೆಲಸವನ್ನು ನಮ್ಮ ಎತ್ತುಗಳು ಮಾಡಬಲ್ಲವು. ಇಂದು ಉಪಯೋಗಕ್ಕೆ ಬರುವ ಟ್ರ್ಯಾಕ್ಟರ್‌ಗಳಿಗಾಗಿ ಪ್ರತಿವರ್ಷ ಸುಮಾರು ಇಪ್ಪತ್ತೆರಡುಸಾವಿರ ಕೋಟಿಯಷ್ಟು ಡೀಸೆಲ್, ಆಯಿಲ್ ಬೇಕಾಗುತ್ತದೆ. ಇದಲ್ಲದೆ ಅದನ್ನು ನೋಡಿಕೊಳ್ಳುವ ಖರ್ಚೂ ಬೇರೆ ಇದೆ. ನಾವು ಒಂದು ವೇಳೆ ಎತ್ತುಗಳ ಬದಲಿಗೆ ಟ್ರ್ಯಾಕ್ಟರ್ ಖರೀದಿಸಿದರೆ ಸುಮಾರು ಒಂದು ಲಕ್ಷ ಅರವತ್ತು ಸಾವಿರ ಕೋಟಿಯಷ್ಟು ಖರ್ಚು ಮಾಡಬೇಕಾಗುವುದು ಮತ್ತು ಪೆಟ್ರೋಲ್ ಇತ್ಯಾದಿಗಳಿಗಾಗಿ ಯಾವಾಗಲೂ ವಿದೇಶಗಳನ್ನೇ ಅವಲಂಬಿಸಬೇಕಾಗುವುದು.

ಇಂದು ನಮ್ಮ ದೇಶದಲ್ಲಿ ವ್ಯವಸಾಯ ಅಥವಾ ಯಾತಾಯಾತಕ್ಕಾಗಿ ದನಗಳ ಉಪಯೋಗವನ್ನು ಒಂದು ವರ್ಷಕ್ಕೆ ೩೦೦ ಘಂಟೆಗಳಿಂದ ೧೫೦೦ ಘಂಟೆಗಳ ಮಾಡಲಾಗುತ್ತಿದೆ. ಅಂದರೆ ಒಂದು ವರ್ಷದಲ್ಲಿ ಮೂರು-ನಾಲ್ಕು ತಿಂಗಳು ಅವುಗಳ ಉಪಯೋಗವಾಗುತ್ತದೆಂದು ಹೇಳಬಹುದು. ಒಂದು ವೇಳೆ ನಾವು ಎತ್ತುಗಳ ಉಪಯೋಗವನ್ನು ಹೆಚ್ಚಿಸಿದರೆ ಮತ್ತು ಅವುಗಳ ಉಪಯೋಗವನ್ನು ಸರಿಯಾಗಿ ವ್ಯವಸ್ಥೆಗೊಳಿಸಿದರೆ ಆಗ ಇಡೀ ವರ್ಷ ಇಪ್ಪತ್ನಾಲ್ಕು ಗಂಟೆಯೂ ಕೆಲಸವನ್ನು ಮಾಡಿಸಬಹುದು. ಅವುಗಳ ಉತ್ಪಾದನೆ ಮತ್ತು ಉಪಯುಕ್ತತೆ ಹೆಚ್ಚುವುದರಿಂದ ಅವುಗಳ ಪಾಲನೆ ಮಾಡುವುದು ಸಾಮಾನ್ಯ ರೈತರಿಗೆ ಸಹಜವಾಗಿ ಸಾಧ್ಯವಾಗುತ್ತದೆ. ★

('ಶಾಂತಿಸೇವಕ' ಸಾಭಾರ)

ವಾಚಕ ಮಿತ್ರರಲ್ಲಿ ವಿನಂತಿ.

"ಜನಪದ ವಿಚಾರ"ದ ಈ ಸಂಚಿಕೆಯನ್ನು ನಿಮ್ಮ ಬಳಿಗೆ ತಲುಪಿಸುವ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದೇವೆ! ಅನೇಕ ವರ್ಷಗಳ ನಂತರ ಪುನಃ ಪತ್ರಿಕೆ ದಿನದ ಬೆಳಕನ್ನು ಕಂಡಿದೆ - ಹೊಸ ಶತಮಾನದ, ಹೊಸ ಸಹಸ್ರಮಾನದ ಸಂಕ್ರಾಂತಿ ಕಾಲದ ಪ್ರೇರಣೆಯೊಂದಿಗೆ. ದಯಮಾಡಿ ವಾರ್ಷಿಕ ಚಂದಾ ೧೦೦/- ರೂ. ಗಳನ್ನಾಗಲೀ ಇಲ್ಲವೇ ಈ ಪತ್ರಿಕೆಯ ಮುಖಬೆಲೆ ೧೦/- ರೂ. ಗಳನ್ನಾಗಲೀ ನಿಮ್ಮ ಇಚ್ಛೆಗನುಸಾರವಾಗಿ ಕಳುಹಿಸಿ ಈ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ಕೋರಿಕೆ.

-ಪ್ರಕಾಶಕರು

'ಹಿಂದ್ ಸ್ವರಾಜ್' ಸಮಕಾಲೀನ ಸಾಂಸ್ಕೃತಿಕ ಮನಸ್ಸು

–ಕಿ. ರಂ. ನಾಗರಾಜ

[ಅಕ್ಟೋಬರ್ ತಿಂಗಳು ಗಾಂಧಿ ಜಯಂತಿ ಮಾಸ. ಆ ಸಂದರ್ಭದಲ್ಲಿ ಈ ಲೇಖನ. –ಸಂ]

"ಹಿಂದ್ ಸ್ವರಾಜ್" ಭಾರತೀಯರು ಸ್ವಾತಂತ್ರ್ಯವನ್ನು ಪಡೆಯಬೇಕಾದದ್ದು ಏಕೆ, ಹೇಗೆ ಎಂಬುದನ್ನು ಅದರ ಎಲ್ಲ ವಿವರಗಳೊಂದಿಗೆ ಹೇಳುವ ಗಾಂಧೀಜಿಯವರ ಒಂದು ಪುಸ್ತಕ. ಈ ಪುಸ್ತಕವನ್ನು ಗಾಂಧೀಜಿ ಬರೆದದ್ದು ೮೧ ವರ್ಷಗಳ ಹಿಂದೆ. ಅಂದು ಈ ಕೃತಿಗೆ ಎಷ್ಟು ಮಹತ್ವವಿತ್ತೊ ಅಷ್ಟೇ ಮಹತ್ವ ಈ ಹೊತ್ತಿಗೂ ಇದೆ. ಇನ್ನೂ ಕೆಲವು ಕಾಲ ಇದೇ ಮಹತ್ವವನ್ನು ಈ ಪುಸ್ತಕ ಉಳಿಸಿಕೊಳ್ಳುತ್ತದೆ ಕೂಡ. ನಾವು ಇಂದು ಉಸಿರಾಡುತ್ತಿರುವುದು ಪ್ರಜಾರಾಜ್ಯದಲ್ಲಿ ಎಂದು ಎನಿಸಿದರೂ ನಿಜವಾದ ಪ್ರಜಾರಾಜ್ಯ ಇನ್ನೂ ಉದಯಿಸಬೇಕಾಗಿದೆ ಎಂಬುದನ್ನು ಈ ಪುಸ್ತಕದ ಪ್ರತಿಪುಟವೂ ಮನವರಿಕೆ ಮಾಡಿಕೊಡುತ್ತದೆ. ಗಾಂಧೀಜಿಯವರ ಸ್ವರಾಜ್ಯ ದೃಷ್ಟಿ ಇಂಡಿಯಾದ ಬದುಕಿನ ಎಲ್ಲ ಅಂಗಗಳನ್ನು ವಿಶ್ಲೇಷಣೆಗೆ ಹೇಗೆ ಒಳಪಡಿಸುತ್ತದೆ ಎಂಬುದನ್ನು ಇಲ್ಲಿ ಕಾಣುತ್ತೇವೆ.

"ಹಿಂದ್ ಸ್ವರಾಜ್" ಸ್ವಾತಂತ್ರ್ಯತತ್ವ ಹಾಗೂ ಹಾಗೂ ಅಂತಹ ಸ್ವಾತಂತ್ರ್ಯವನ್ನು ಪಡೆಯಲು ಎಂಥ ಕ್ರಿಯೆಯು ಅಗತ್ಯವಿದೆ ಎಂಬುದನ್ನು ತುಂಬ ನೇರವಾಗಿ ಹೇಳಿರುವ ಕೃತಿ. ಗಾಂಧೀಜಿಯವರ ರಾಜಕೀಯ ಜಿಜ್ಞಾಸೆ, ಅವರು ನಡೆಸಿದ ರಾಜಕೀಯ ಕ್ರಿಯೆ ಈ ಎಲ್ಲ ಮುಖಗಳ ಪರಿಚಯ ಈ ಪುಸ್ತಿಕೆಯಿಂದ ಆಗುತ್ತದೆ. ವಸಾಹತುಶಾಹಿಯನ್ನು ಕುರಿತ ಚಿಂತನೆಗಳು ಇಂದಿಗೂ ನಮ್ಮ ಸಂದರ್ಭದಲ್ಲಿ ಅನೇಕ ಮಟ್ಟಗಳಲ್ಲಿ ನಡೆಯುತ್ತಲಿದೆ. ಆ ವಿಚಾರಧಾರೆಗೆ ಗಾಂಧೀಜಿಯವರ "ಹಿಂದ್ ಸ್ವರಾಜ್" ತುಂಬ ಮಹತ್ವದ ನೆಲಗಟ್ಟನ್ನು ಒದಗಿಸಿಕೊಡುತ್ತದೆ.

ಬ್ರಿಟಿಷರ ವ್ಯಾಪಾರಿ ಪಿಶಾಚ ಹಿಂದುಸ್ತಾನದ ಸತ್ವವನ್ನು ಬರಿದು ಮಾಡುತ್ತಿರುವ ಬಗೆಯನ್ನು ಕುರಿತು ಇಲ್ಲಿ ಗಾಂಧೀಜಿಯವರು ಕನಲಿದ್ದಾರೆ. ಗಾಂಧೀಜಿಯವರ ಬ್ರಿಟಿಷ್ ವಿರೋಧಿ ಧೋರಣೆ ಎಷ್ಟು ಮೂಲಭೂತವಾದದ್ದು ಎಂದು ತಿಳಿಯಲು ಈ ದಾಖಲೆ ಸಹಾಯಕ. ಭಾರತದಲ್ಲಿ ನೆಲೆಗೊಂಡಿದ್ದ ವಸಾಹತುಗಳಿಗೆ ಪ್ರತಿಕ್ರಿಯಿಸಿದ ಗಾಂಧೀಜಿಯವರ ಈ ದಾಖಲೆ ಕೇವಲ ಭಾರತೀಯ ಸಂದರ್ಭಕ್ಕೆ ಮಾತ್ರ ಸೀಮಿತವಾದುದಲ್ಲ. ಇಡೀ ಜಗತ್ತಿನ ವಸಾಹತುಶಾಹಿ ಸಂದರ್ಭಕ್ಕೆ ಅನ್ವಯಿಸುವ ತಾತ್ವಿಕ ನಿರ್ದೇಶನ ಸೂತ್ರಗಳು ಈ ಕೃತಿಯ

ಮೂಲಕ ಪ್ರಕಟಗೊಂಡಿವೆ.

ಸಾಮಾನ್ಯವಾಗಿ ಗಾಂಧೀಜಿಯವರ ರಾಜಕೀಯ ಪ್ರಕ್ರಿಯೆ ಹಾಗೂ ಧೋರಣೆಗಳು ತುಂಬ ಸೌಮ್ಯ ಸ್ವರೂಪದ್ದು, ಸತ್ಯಾಗ್ರಹ ಮಾರ್ಗದ್ದು ಎಂದು ಹೇಳುವ ಟೀಕಾಕಾರರಿಗೆ ಅವರ ಧೋರಣೆಗಳ ಬಗೆಗೆ ಸ್ಪಷ್ಟ ಕಲ್ಪನೆ ಇಲ್ಲ ವೆಂದೇ ಹೇಳಬೇಕು. ಏಕೆಂದರೆ ಗಾಂಧೀಜಿಯವರು ವಸಾಹತುಶಾಹಿಯ ಶಕ್ತಿ-ಸಾಮರ್ಥ್ಯಗಳ ಮಧ್ಯೆ ನಿಂತು ಹಿಂದ್ ಸ್ವರಾಜ್‌ನ ಘೋಷಣೆಯನ್ನು ಮಾಡಿಸಿ ದವರು. ಅಲ್ಲದೆ ಸ್ವಾತಂತ್ರ್ಯವನ್ನು ಕಳೆದುಕೊಂಡ ದುರ್ಬಲರ ಸ್ಥಿತಿಯ ಮಧ್ಯೆ ಹೋರಾಟವೊಂದನ್ನು ನೆಲೆಗೊಳಿಸುವ ಉದ್ದೇಶದಿಂದ ಕೂಡಿದ್ದಾಗಿತ್ತು. ಆದ್ದ ರಿಂದಲೇ ಗಾಂಧೀಜಿ ಈ ಪುಸ್ತಕವನ್ನು ಕುರಿತು ಹೀಗೆ ಹೇಳಿದರು, "ಈ ಪುಸ್ತಕವನ್ನು ಎಳೆ ಮಗುವಿಗೂ ಕೊಡಬಹುದು. ಇದು ದ್ವೇಷದ ಬದಲು ಪ್ರೀತಿಯನ್ನು ಬೋಧಿ ಸುತ್ತದೆ. ಹಿಂಸೆಗೆ ಬದಲು ಆತ್ಮತ್ಯಾಗವನ್ನು ಕಲಿಸುತ್ತದೆ. ಪಶುಬಲಕ್ಕೆ ವಿರುದ್ಧ ವಾಗಿ ಆತ್ಮಬಲವನ್ನು ನಿಲ್ಲಿಸುತ್ತದೆ... ಇದರಲ್ಲಿ ಒಂದು ಪದವನ್ನು ಆದರೂ ಬದಲಿಸಲಾರೆ: ಒಂದೇ ಒಂದನ್ನು ಒಬ್ಬ ಗೆಳತಿಯ ತೃಪ್ತಿಗಾಗಿ ತೆಗೆದು ಹಾಕಿ ದ್ದೇನೆ". ಇದು ಪುಸ್ತಕವನ್ನು ಕುರಿತು ಗಾಂಧೀಜಿಯವರ ನಿಲುವು.

"ಹಿಂದ್ ಸ್ವರಾಜ್" ಆಧುನಿಕ ನಾಗರಿಕತೆಯನ್ನು ಕುರಿತ ತೀವ್ರ ವಿಮ ರ್ಶೆಯ ಕೃತಿ. ಬ್ರಿಟಿಷ್ ವಸಾಹತುಶಾಹಿ ರಾಜಕೀಯ ವ್ಯವಸ್ಥೆ ಭಾರತದಲ್ಲಿ ತರುತ್ತಿದ್ದ ಬದಲಾವಣೆಗಳ ಬಗ್ಗೆ ತೀವ್ರವಾದ ವಿಮರ್ಶೆ ಇಲ್ಲಿ ನಡೆಯುತ್ತದೆ. ಗಾಂಧೀಜಿ ಭಾರತಕ್ಕೆ ರೈಲು, ಇಂಗ್ಲಿಷ್ ವೈದ್ಯ ಪದ್ಧತಿ ಹಾಗೂ ಬ್ರಿಟಿಷ್ ನ್ಯಾಯ ಪದ್ಧತಿ ಬಂದುದನ್ನು ತೀವ್ರವಾಗಿ ಖಂಡಿಸುತ್ತಾರೆ. ಈ ಖಂಡನೆ ಮೇಲುನೋಟಕ್ಕೆ ಅಸಂಗತವೆಂದು ತೋರಬಹುದು. ಆದರೆ ವಸಾ ಹತುಶಾಹಿಯು ಭಾರತದಲ್ಲಿ ಭದ್ರವಾಗಿ ಬೇರೂರಲು ಈ ಮೂರು ವ್ಯವಸ್ಥೆಗಳು ಹೇಗೆ ಕಾರಣವಾಗುತ್ತದೆ ಎಂಬುದನ್ನು ಅವರು ಸೂಕ್ಷ್ಮವಾಗಿ ವಿಶ್ಲೇಷಿಸುತ್ತಾರೆ. ರೈಲುಗಳು ಬಂದದ್ದರಿಂದ ಕ್ಷಾಮಡಾಮರ, ರೋಗರುಜಿನಗಳು ಕಾಣಿಸಿಕೊಳ್ಳಲು ಕಾರಣವಾಯಿತೆಂಬುದು ಗಾಂಧೀಜಿಯವರ ವಿವರಣೆ. ರೈಲುಗಳು ಕೇಂದ್ರೀಕೃತ ವ್ಯವಸ್ಥೆಯ ಒಂದು ಭಾಗವಾಗಿ ವಿಸ್ತಾರಗೊಂಡು ವಿಕೇಂದ್ರೀಕರಣ ವ್ಯವಸ್ಥೆ ಯನ್ನು ಮೂಲಭೂತವಾಗಿ ಪಲ್ಲಟಗೊಳಿಸುತ್ತದೆಂಬುದು ಅವರ ನಿಲುವಾಗಿತ್ತು. ನಾಗರಿಕತೆಯ ಕೆಡುಕಿನ ಸ್ವರೂಪವನ್ನು ತಿಳಿಯಲು ರೈಲು ಒಂದು ಸಂಕೇತ ವೆಂದು ಅವರು ತಿಳಿಯುತ್ತಾರೆ. ವೇಗದ ಸಂಸ್ಕೃತಿಯನ್ನು ನಿರಾಕರಿಸಿ ಮನು ಷ್ಯನ ಸಾಧ್ಯತೆಗಳನ್ನು ಎತ್ತಿ ಹಿಡಿಯುವ ದೃಷ್ಟಿಯೊಂದು ಇಲ್ಲಿ ಪ್ರಕಟಗೊಂ

ಡಿದೆ. ಆಧುನಿಕ ನಾಗರಿಕತೆಯಲ್ಲಿ ತಿಳಿದೋ ತಿಳಿಯದೆಯೋ ನಂಬಿಕೆಯನ್ನು ಇಟ್ಟಿರುವ ನಾವು ಗಾಂಧಿಜೀಯವರ ಚಿಂತನೆಯ ಆಳಕ್ಕೆ ಪ್ರವೇಶಿಸುವುದು ತುಸು ಕಷ್ಟವೇ ಆಗಬಹುದು. ಕೈಗಾರೀಕರಣವನ್ನು ಪ್ರಬಲವಾಗಿ ನಂಬಿದ ವಸಾಹತುಶಾಹಿ ರಾಜಕೀಯ ಕುತಂತ್ರಕ್ಕೆ ಭಾರತೀಯ ಗ್ರಾಮ ಸಮಾಜ ಹೇಗೆ ಪ್ರತಿಕ್ರಿಯಿಸಬೇಕೆಂಬುದನ್ನು ಗಾಂಧೀಜಿ ಇಲ್ಲಿ ಮನವರಿಕೆ ಮಾಡಿಕೊಡುತ್ತಾರೆ. ಅಂದರೆ ಮನುಷ್ಯನ ಸಹಜವಾದ ಶಕ್ತಿ-ಸಾಮರ್ಥ್ಯ ಸಂಪನ್ಮೂಲವನ್ನು ಹೇಗೆ ರೂಢಿಸಬೇಕೆಂಬುದನ್ನು ಗಾಂಧೀಜಿಯವರ ರೈಲನ್ನು ಕುರಿತ ವಿಶ್ಲೇಷಣೆಯ ಮೂಲಕ ತಿಳಿಯುತ್ತೇವೆ. ಭಾರತದ ಜನಶಕ್ತಿ ಮತ್ತು ಅದರ ಬಳಕೆಯನ್ನು ಕುರಿತ ವ್ಯಾಖ್ಯೆ ಇದಾಗುತ್ತದೆ.

"ಹಿಂದ್ ಸ್ವರಾಜ್" ಪುಸ್ತಿಕೆಯ ಮಹತ್ವದ ಭಾಗವೆಂದರೆ ಹಿಂದೂ-ಮುಸ್ಲಿಮರ ಐಕ್ಯತೆಗೆ ಸಂಬಂಧಿಸಿದ್ದು. "ಹಿಂದ್ ಸ್ವರಾಜ್" ಪುಸ್ತಿಕೆಯ ಓದುಗ ಗಾಂಧೀಜಿಯವರನ್ನು "ಮುಸಲ್ಮಾನರು ಇಲ್ಲಿಗೆ ಬಂದುದರಿಂದ ನಮ್ಮ ರಾಷ್ಟ್ರೀಯತೆ ಭಂಗವಾಗಲಿಲ್ಲವೇ?" ಎಂಬ ನೇರ ಪ್ರಶ್ನೆಯನ್ನು ಕೇಳುತ್ತಾನೆ. ಅದಕ್ಕೆ ಗಾಂಧೀಜಿಯರ ಉತ್ತರ ತುಂಬ ನೇರ ಹಾಗೂ ಖಚಿತವಾದದ್ದು. "ಬೇರೆ ದೇಶಗಳಿಂದ ಹೊಸಬರು ಬಂದರೆ ನಮ್ಮ ರಾಷ್ಟ್ರೀಯತೆ ನಷ್ಟವಾಗದು. ಹಾಗೆ ಬಂದ ಜನ ಈ ದೇಶದ ಒಟ್ಟು ಕ್ರಿಯೆಯಲ್ಲಿ ಬೆರೆತು ಹೋಗುತ್ತಾರೆ" ಎಂದು ಅವರು ಹೇಳುತ್ತಾರೆ.

ಯಾವುದೇ ದೇಶದ ಹೊರಗಿನವರನ್ನು ಜೀರ್ಣಿಸಿಕೊಳ್ಳುವ ಶಕ್ತಿಬೇಕು ಎಂಬುದು ಗಾಂಧೀಜಿಯವರ ನಿಲುವು. ಅಸಂಖ್ಯ ಮನುಷ್ಯರು, ಅಸಂಖ್ಯ ಧರ್ಮಗಳು ಪರಸ್ಪರ ಸಹಬಾಳ್ವೆಯಲ್ಲಿ ಬದುಕಲು ಸಾಧ್ಯ ಎಂಬುದನ್ನು ಹಿಂದೂಸ್ಥಾನದಂಥ ರಾಷ್ಟ್ರ ಜಗತ್ತಿಗೆ ತೋರಿಸಿಕೊಡಬೇಕು. ಹಿಂದೂಸ್ಥಾನ ಕೇವಲ ಹಿಂದೂಗಳಿಗಾಗಿಯೇ ಇರಬೇಕೆಂದು ಯೋಚಿಸುವುದು ಒಂದು ಅಸಂಗತವಾದ ವಾದ ಎಂಬುದು ಗಾಂಧೀಜಿಯವರ ಖಚಿತವಾದ ನಿಲುವು. ಅಷ್ಟೇ ಅಲ್ಲದೆ ಹಿಂದೂಸ್ಥಾನದಲ್ಲಿ ಹಿಂದೂಗಳೇ ಇರಬೇಕೆಂದು ಯೋಚಿಸುವವರು ಕೇವಲ ಕನಸು ಕಾಣುತ್ತಿದ್ದಾರೆ ಎಂದು ಗಾಂಧೀಜಿ ಹೇಳುತ್ತಾರೆ. ಧರ್ಮ ಮತ್ತು ರಾಷ್ಟ್ರಗಳ ಸಂಬಂಧ ಎಂದಿಗೂ ಖಚಿತವಲ್ಲವೆಂಬುದೇ ಗಾಂಧೀಜಿಯವರ ಸ್ಪಷ್ಟವಾದ ನಿಲುವು.

ಹಿಂದೂ ಮತ್ತು ಮುಸ್ಲಿಮರ ನಡುವೆ ಜನ್ಮ ವೈರವಿದೆ ಎಂದು ತಿಳಿಯುವುದು ಅತ್ಯಂತ ಆತಂಕಕಾರಿಯಾದದ್ದೆಂದು ಗಾಂಧೀಜಿ ಹೇಳುತ್ತಾರೆ. ಇಂತಹ ವೈರದ ಬೀಜವನ್ನು ಬಿತ್ತಿದವರು ನಮ್ಮ ಶತ್ರುಗಳಾದ ವಸಾಹತುಶಾಹಿ ಬ್ರಿಟಿಷರು ಎಂಬುದನ್ನು ಅವರು ಮನವರಿಕೆ ಮಾಡಿಕೊಡುತ್ತಾರೆ. ಅಲ್ಲದೆ ಮುಸ್ಲಿಂ

ಸಾಮ್ರಾಟರ ಕೆಳಗೆ ಹಿಂದೂಗಳೂ, ಹಿಂದೂಗಳ ಕೆಳಗೆ ಮುಸ್ಲಿಮರೂ ದೇಶದ ಸಂಸ್ಕೃತಿಯನ್ನು ಬೆಳೆಸಿದರೆಂಬ ನಿತ್ಯ ಸತ್ಯವನ್ನು ಗಾಂಧೀಜಿ ಪ್ರತಿಪಾದಿಸಿದರು. ಇಬ್ಬರಲ್ಲಿಯೂ ಹರಿಯುತ್ತಿರುವ ರಕ್ತ ಒಂದೇ ಎಂಬುದು ಗಾಂಧೀಜಿಯವರ ಅಖಂಡ ನಂಬಿಕೆ. ಬ್ರಿಟಿಷರ ಕಪಿಮುಷ್ಟಿಗೆ ಸಿಲುಕಿ ಹಿಂದೂಗಳೂ ಹಾಗೂ ಮುಸ್ಲಿಮರೂ ಅದರಿಂದ ಬಿಡಿಸಿಕೊಂಡು ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳಬೇಕೆಂದು ಅವರು ಸೂಚಿಸುತ್ತಾರೆ. ಗಾಂಧೀಜಿಯವರ ಮಾನವತಾ ವಾದದ ದಟ್ಟ ನಿಲುವುಗಳು ಸ್ವರಾಜ್ಯ ಕಲ್ಪನೆಯ ಹಿನ್ನೆಲೆಯಲ್ಲಿ ಪ್ರಕಟಗೊಳ್ಳುವುದು ಹೀಗೆ. ಲೋಕದಲ್ಲಿ ವ್ಯಕ್ತಿ ವ್ಯಕ್ತಿಗಳ ನಡುವಣ ಜಗಳ, ಜಾತಿ ಜಾತಿಗಳ ನಡುವಣ ಜಗಳ ಇವೆಲ್ಲ ಇದ್ದದ್ದೆ. ಇಂಥ ಜಗಳ ಹಿಂದೂಗಳು ಹಾಗೂ ಮುಸ್ಲಿಮರ ನಡುವೆ ಮಾತ್ರ ಇದೆ ಎಂದು ಹೇಳುವುದರಲ್ಲಿ ಯಾವ ಅರ್ಥವೂ ಇಲ್ಲ. ಲೋಕದಲ್ಲಿ ಜಗಳದ ಬೀಜವೇ ಸುಟ್ಟು ಹೋಯಬೇಕಿದೆ. ಅದನ್ನು ಬೆರಳಿಟ್ಟು ದೊಡ್ಡದು ಮಾಡಿ ತೋರುವುದು ಅನಗತ್ಯ ಎಂಬುದನ್ನು ಗಾಂಧೀಜಿ 'ಹಿಂದ್ ಸ್ವರಾಜ್'ನಲ್ಲಿ ಸ್ಪಷ್ಟಪಡಿಸುತ್ತಾರೆ.

ಇಂಗ್ಲೆಂಡಿನ ಸ್ಥಿತಿಗತಿಗಳನ್ನು ಬಯಲುಗೊಳಿಸುವುದು "ಹಿಂದ್ ಸ್ವರಾಜ್" ಕೃತಿಯ ಮತ್ತೊಂದು ಉದ್ದೇಶ. ಇಂಗ್ಲೆಂಡಿನ ರಾಜಕೀಯ ಜೀವನ ಭ್ರಷ್ಟಗೊಂಡಿದೆ ಎಂಬುದನ್ನು ಗಾಂಧೀಜಿ ಅತ್ಯಂತ ತೀಕ್ಷ್ಣವಾಗಿ ಪ್ರತಿಪಾದಿಸುತ್ತಾರೆ. ಇಂಗ್ಲೆಂಡನ್ನು ಪಾರ್ಲಿಮೆಂಟಿನ ತಾಯಿ ಎಂದು ಕರೆಯುವುದನ್ನು ಕೇವಲ ಬಂಜೆ ಹಾಗೂ ವೇಶ್ಯೆ ಎಂದು ಅವರು ಹೇಳುತ್ತಾರೆ. ಈ ಎರಡು ಮಾತುಗಳನ್ನು ಬಳಸುವಾಗ ಅವು ತುಂಬ ಕಠೋರವಾದದ್ದು ಎಂಬುದನ್ನು ಗಾಂಧೀಜಿ ಬಲ್ಲರು. ಇಂಗ್ಲೆಂಡಿನ ಪಾರ್ಲಿಮೆಂಟ್ ನಿಷ್ಕ್ರಿಯವಾದದ್ದರಿಂದ ಅದು ಬಂಜೆಯೆಂದೂ, ಹೊರಗಿನ ಒತ್ತಾಯವಿಲ್ಲದೆ ಅದು ಏನನ್ನೂ ಮಾಡದುದ್ದಕ್ಕೆ ಅದನ್ನು ವೇಶ್ಯೆಯೆಂದೂ ಅವರು ಕರೆಯುತ್ತಾರೆ. ಇಂಗ್ಲೆಂಡಿನ ಪಾರ್ಲಿಮೆಂಟ್ ಕೇವಲ ಮಾತಿನ ಆಗರವೆಂದೂ ಅವರು ಟೀಕಿಸುತ್ತಾರೆ. ಆ ಪಾರ್ಲಿಮೆಂಟಿಗೆ ವಾಸ್ತವವಾಗಿ ಯಾರೊಬ್ಬರೂ ಮುಖ್ಯರಲ್ಲ. ತನ್ನ ಪ್ರಭುತ್ವವನ್ನು ಉಳಿಸಿಕೊಳ್ಳುವುದೇ ಅದರ ಮುಖ್ಯ ಗುರಿ. ಹೀಗಾಗಿ ಇಂಗ್ಲೆಂಡಿನ ಪಾರ್ಲಿಮೆಂಟ್ ಸೋಗಲಾಡಿತನದ ಸಂಕೇತವೆಂದು ಅವರು ಕರೆಯುತ್ತಾರೆ.

"ಹಿಂದ್ ಸ್ವರಾಜ್" ಕೇವಲ ಬ್ರಿಟಿಷ್ ವಿರೋಧಿ ದಾಖಲೆ ಮಾತ್ರವಲ್ಲ; ಜಾಗತಿಕ ವಸಾಹತುಶಾಹಿ ವಿರೋಧಿ ದಾಖಲೆ. ಇದರೊಂದಿಗೆ ಪರಕೀಯ ದಾಸ್ಯಕ್ಕೆ ಗುರಿಯಾದ ಜನಮನವನ್ನು ತಲ್ಲಣ, ಕ್ರೌರ್ಯಗಳಿಂದ ಪಾರುಮಾಡುವ ಸೂಕ್ಷ್ಮವಾದ ವಿಧಿವಿಧಾನಗಳು ಈ ಕೃತಿಯಿಂದ ಹೊರಪಡುತ್ತದೆ. ಜಗತ್ತಿನ

ಅನೇಕ ಮಹೋನ್ನತ ರಾಜಕೀಯ ದಾಖಲೆಗಳ ಮಧ್ಯೆ "ಹಿಂದ್ ಸ್ವರಾಜ್"ಗೆ ಒಂದು ಅರ್ಥಪೂರ್ಣ ಸ್ಥಾನವಿದೆ. ಗಾಂಧೀಜಿಯವರ ರಾಜಕೀಯ ನಿಲುವುಗಳನ್ನು ಸೌಮ್ಯವಾದಿ ಮಾರ್ಗವೆಂದು ತಿಳಿಯುವವರಿಗೆ ಈ ಕೃತಿಯಲ್ಲಿ ತಕ್ಕ ಉತ್ತರವಿದೆ. ಅಂಥ ತಿಳುವಳಿಕೆಗೆ ಈ ಕೃತಿ ಒಂದು ಸವಾಲು.

"ಹಿಂದ್ ಸ್ವರಾಜ್" ಗ್ರಾಮೀಣ ಮತ್ತು ನಗರ ಸಂಸ್ಕೃತಿಯ ನಡುವಣ ಕಂದರವನ್ನು ಗಂಭೀರವಾಗಿ ವಿಶ್ಲೇಷಿಸುತ್ತದೆ. ನಾಗರಿಕತೆಯಲ್ಲಿ ಸಮತೋಲ ಮತ್ತು ಸೃಷ್ಟಿಶೀಲತೆ ಹಾಗೂ ಕ್ರಿಯಾಶೀಲತೆಯನ್ನು ಕಾಪಾಡುವ ಹೊಣೆಗಾರಿಕೆ ಎಂದಿಗಿಂತ ಇಂದು ಹೆಚ್ಚು ಖಚಿತಪಡುತ್ತಿದೆ. ಯಂತ್ರ ನಾಗರಿತೆಯ ವ್ಯಾಮೋಹ ಮತ್ತು ಮಾನವತೆಯ ಅಳಿವು ಉಳಿವುಗಳ ಪ್ರಶ್ನೆಯನ್ನು ಈ ದಾಖಲೆಗಿಂತ ಹೆಚ್ಚು ಸ್ಪಷ್ಟವಾಗಿ ಮುಖಾಮುಖಿಯಾಗಿಸುವ ಕೃತಿಯನ್ನು ನಾವು ಕಾಣಲಾರೆವು. ಇಂಗ್ಲಿಷ್ ವಿದ್ಯಾಭ್ಯಾಸ, ಅದರ ಕ್ರೌರ್ಯಗಳು ಅದರಿಂದ ಉಂಟಾದ ಮಾನವತೆಯ ಅಪಮೌಲ್ಯವನ್ನು ಈ ಕೃತಿ ಸೂಕ್ಷ್ಮವಾದ ಚಿಂತನೆಗೆ ಗುರಿಪಡಿಸಿದೆ.

ಈ ಕೃತಿ ಒಂದು ಸಂವಾದದ ಸ್ವರೂಪದ ಕೃತಿ. ಓದುಗನ ಪ್ರಶ್ನೆಗಳಿಗೆ ಸಂಪಾದಕ ಉತ್ತರ ಕೊಡುವ ಕ್ರಮದಲ್ಲಿ ಇದು ನಿರೂಪಿತಗೊಂಡಿದೆ. ಈ ಕೃತಿಯಲ್ಲಿನ ಓದುಗನೂ ಗಾಂಧಿಯೇ. ಆ ಓದುಗನ ಪ್ರಶ್ನೆಗಳಿಗೆ ಉತ್ತರ ಕೊಡುತ್ತಿರುವ ಸಂಪಾದಕನೂ ಗಾಂಧಿಯೇ. ಇದರಿಂದಾಗಿ ಗಾಂಧೀಜಿ ಇಲ್ಲಿ ಪ್ರತಿವಾದಿಯಂತೆ ಕಾಣುವುದಿಲ್ಲ. ಬದಲಾಗಿ ತನ್ನ ಅಂತರಂಗದ ಶೋಧನೆಯನ್ನು ನಿರಂತರವಾಗಿ ಮಾಡಿಕೊಳ್ಳುತ್ತಿರುವ ಆತ್ಮಶೋಧಕನಾಗಿ ಕಾಣುತ್ತಾರೆ. ಗಾಂಧೀಜಿಯ ವಿಕಾಸವಿರುವುದು ಇಂತಹ ದಟ್ಟ ಅಂತರಂಗದ ವಿಮರ್ಶೆಯಲ್ಲಿ.

"ಹಿಂದ್ ಸ್ವರಾಜ್" ಸ್ವಾತಂತ್ರ್ಯದ ಅಗತ್ಯತೆ ಮತ್ತು ಮನುಷ್ಯನ ಮನಸ್ಸನ್ನು ಒಂದುಗೊಳಿಸಿ ನೋಡುವ ಮಹೋನ್ನತ ತತ್ವವನ್ನು ಅನಾವರಣಗೊಳಿಸುವ ಕೃತಿ. ರಾಜಕೀಯ, ಧರ್ಮ, ಸಂಸ್ಕೃತಿಗಳು ಪ್ರತ್ಯೇಕಗೊಂಡ ವಿಚಾರಗಳಾಗದೆ ಅವೆಲ್ಲ ಮಾನುಷ ಸತ್ವವನ್ನು ಸಮೃದ್ಧಗೊಳಿಸುವಲ್ಲಿ ಎಂಥ ಪಾತ್ರ ಪಡೆಯಬೇಕೆಂಬುದರತ್ತ ಗಮನಗೊಂಡದ್ದು. ಸಮಕಾಲೀನ ರಾಜಕಾರಣ ಅಧಿಕಾರ ರೂಢ ನೆಲೆಗಳಿಂದ ಪ್ರೇರಿತವಾದ ಒಂದು ತಂತ್ರ. ಗಾಂಧಿಯ ಸ್ವರಾಜ್ಯ ದೃಷ್ಟಿ ಒಂದು ತಂತ್ರವಲ್ಲ; ಅದೊಂದು ಮಾನವೀಕರಣದ ಸಾಧನ. ರಾಜಕೀಯವು ಮಾನವೀಕರದಿಂದ ದೂರವಾದಂತೆಲ್ಲ ಭ್ರಷ್ಟತೆ, ಸ್ವಜನ ಪಕ್ಷಪಾತ, ಹಣದ ಹುಚ್ಚು ಹಾಗೂ ಕ್ರೌರ್ಯಗಳಿಗೆ ಹತ್ತಿರವಾಗುತ್ತ ಬರುತ್ತದೆ. ಆದ್ದರಿಂದಲೇ ವಸಾಹತುಶಾಹಿ, ಬಂಡವಳಿಗ ಪದ್ಧತಿ, ಜಾತಿ-ಧರ್ಮಗಳ ಹಲ್ಲುಗುರುಗಳನ್ನು ಮಾನವೀಕರಣದಿಂದ ಹೇಗೆ ಸಾಧುಗೊಳಿಸಬೇಕೆಂಬುದು ಗಾಂಧೀಜಿಯ ಪ್ರಶ್ನೆ-ಅಂತೆಯೆ ನಮ್ಮ ಸಂದರ್ಭದ ಪ್ರಶ್ನೆ. ★ ('ಶೂದ್ರ' ಸಾಭಾರ)

ಆಧುನಿಕ ಭಗೀರಥ ರಾಜೇಂದ್ರ ಸಿಂಗ್

–ಆಭಾ ಶರ್ಮಾ

(ರಾಜೇಂದ್ರ ಸಿಂಗ್ ಈ ವರ್ಷದ ರೆಮೊನ್ ಮೆಗಾಸೆಸ್ ಪ್ರಶಸ್ತಿ ವಿಜೇತ. ಅವರ ಸಾಧನೆಯ ಪರಿಚಯ ಇಲ್ಲಿದೆ. -ಸಂ)

ರಾಜೇಂದ್ರ ಸಿಂಗ್ ಉತ್ತರ ಪ್ರದೇಶದ ಒಂದು ಹಳ್ಳಿಯಲ್ಲಿ ಹುಟ್ಟಿದವರು. ಅವರಿಗೆ ಸ್ವತಃ ಬಾಯಾರಿಕೆಯ ಅನುಭವವಾಗಲೀ ಅಥವಾ ನೀರಿನ ಅಭಾವದ ಅನುಭವವಾಗಲೀ ಆಗಿರಲೇ ಇಲ್ಲ. ಆದರೆ ೧೯೮೦ ರ ದಶಕದಲ್ಲಿ ಅವರು ಮೊಟ್ಟಮೊದಲ ಬಾರಿಗೆ ರಾಜಾಸ್ಥಾನದ ಹಳ್ಳಿಗಳಲ್ಲಿ ನೀರಿನ ಈ ಅಭಾವವನ್ನು ಕಂಡರು. ಅವರು ರಾಜಾಸ್ಥಾನಕ್ಕೆ ನೆಹರೂ ಯುವಕ ಕೇಂದ್ರದ ಯೋಜನಾಧಿಕಾರಿಯಾಗಿ ದೌಸಾ ಎಂಬ ಹಳ್ಳಿಗೆ ಬಂದಿದ್ದರು. ಆದರೆ ಅದೃಷ್ಟ ಅವರನ್ನು ಆಳ್ವಾರ್ ಎಂಬಲ್ಲಿಗೆ ಕರೆದುಕೊಂಡು ಹೋಯಿತು. ಅಲ್ಲಿ ಅವರು ನೀರಿನ ಸಂರಕ್ಷಕ ಎಂಬ ಹೆಸರಿನಲ್ಲಿ ಪ್ರಸಿದ್ಧಿ ಪಡೆದರು.

ಕೆಲಸವನ್ನು ಬಿಟ್ಟಾಯಿತು; ಈ ಅಲೆಮಾರಿ ಯುವಕನಿಗೆ ಮಾಡಲು ಯಾವ ಕೆಲಸವೂ ಇರಲಿಲ್ಲ. ಆದರೆ ಒಂದು ದಿನ ಒಂದು ಹಳ್ಳಿಯ ಓರ್ವ ಹಿರಿಯನ ಮಾತು ರಾಜೇಂದ್ರ ಸಿಂಗ್‌ನ ಜೀವನದ ಮಾರ್ಗವನ್ನೇ ಬದಲಾಯಿಸಿತು. ಆ ಹಿರಿಯನ ಹೆಸರು ಮಾಂಗು ಪಟೇಲ್. ಆತ ಅಂದ, "ಸುಶಿಕ್ಷಿತ ಜನರಾದ ನೀವು ಕೇವಲ ಮಾತನಾಡುತ್ತೀರಿ; ನಿನಗೆ ನಿಜವಾಗಿಯೂ ಏನಾದರೂ ಮಾಡಬೇಕೆಂಬ ಇಚ್ಛೆ ಇದ್ದರೆ ಕೊಡಲಿ, ಗುದ್ದಲಿ ತೆಗೆದುಕೊಂಡು ನನ್ನೊಂದಿಗೇ ಬಾ." ಅಂದಿನಿಂದ ಸಿಂಗ್ ಹಿಂದಿರುಗಿ ನೋಡಿಲ್ಲ. ಅವರು ಕೆಲವು ಯುವಕರನ್ನು ಕಲೆ ಹಾಕಿದರು. ತರುಣ ಭಾರತ ಸಂಘ ಕಟ್ಟಿದರು. ಈಗ ಈ ಸಂಘ ರಾಜಸ್ಥಾನದಲ್ಲಿ ಪರಂಪರಾಗತ ನೀರಿನ ಸಂರಕ್ಷಣೆಯ ತಂತ್ರಜ್ಞಾನವನ್ನು ಪ್ರಚಾರ ಮಾಡಿದೆ. ಈ ಕಾರಣದಿಂದಾಗಿ ರಾಜೇಂದ್ರ ಸಿಂಗ್ ಈ ವರ್ಷದ ಮೆಗಾಸಿಸ್ ಪ್ರಶಸ್ತಿ ಪಡೆದಿದ್ದಾರೆ.

ರಾಜಾಸ್ಥಾನ ರಾಜ್ಯದಲ್ಲಿ ಆಳ್ವಾರ ಜಿಲ್ಲೆ ಅತ್ಯಂತ ಬರ ಪ್ರದೇಶವೆಂದು ಗುರುತಿಸಲ್ಪಟ್ಟಿತ್ತು. ಆ ಜಿಲ್ಲೆಯ ಪರಿವರ್ತನೆಯ ಕೆಲಸ ೧೯೮೫ ರಲ್ಲಿ ಮಾನು ಪಟೇಲನ ಹಳ್ಳಿಯಾದ ಗೋಪಾಲಪುರದಲ್ಲಿ ತರುಣ ಭಾರತ ಸಂಘದಿಂದ ಪ್ರಾರಂಭವಾಯಿತು. ಅಂದಿನಿಂದ ಈ ವರೆಗೆ ಜಿಲ್ಲೆಯಾದ್ಯಂತ ೪,೫೦೦ ಮಣ್ಣಿನ ಕಟ್ಟೆಗಳನ್ನು ಕಟ್ಟಿದ್ದಾರೆ. ಈ ಮಣ್ಣಿನ ಕಟ್ಟೆಗಳಿಗೆ ರಾಜಾಸ್ಥಾನಿ ಭಾಷೆಯಲ್ಲಿ 'ಜೋಹದ್' ಎಂದು ಕರೆಯುತ್ತಾರೆ. ಜೋಹದ್‌ಗಳನ್ನು ಕಟ್ಟುವ

ಒಂದು ಉದ್ದೇಶ್ಯ ಮಾತ್ರ ಇರಲಿಲ್ಲ. ಅದರ ಮೂಲಕ ನಗರ ವಲಸೆಯಂಥ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದೂ ಉದ್ದೇಶ್ಯವಾಗಿತ್ತು. ಕಳೆದ ಹತ್ತು ವರ್ಷಗಳವರೆಗಷ್ಟೆ ನೀರಿನ ಅಭಾವದಿಂದ ಮತ್ತು ಪದೇ ಪದೇ ಉಂಟಾಗುವ ಕ್ಷಾಮದಿಂದಾಗಿ ಆ ಪ್ರದೇಶದಲ್ಲಿಯ ಯುವಕರು ನಗರಗಳಿಗೆ ವಲಸೆ ಹೋಗಲೇಬೇಕಾಗಿತ್ತೆಂಬುದು ರಾಜೇಂದ್ರ ಸಿಂಗ್ ಅವರಿಗೆ ಗೊತ್ತಾಯಿತು. ನಗರಗಳಿಗೆ ಹೋಗಿ ಅಲ್ಲಿ ಯಾವ ಸೌಕರ್ಯವೂ ಇಲ್ಲದೇ ಇರುವ ಕೊಚ್ಚೆ ಪ್ರದೇಶದಲ್ಲಿ ಹಳ್ಳಿಯ ಯುವಕರು ವಾಸವಿರುತ್ತಿದ್ದರು. ಈಗ ಪರಿಸ್ಥಿತಿ ಸಂಪೂರ್ಣ ಬದಲಾಯಿಸಿದೆ. ಅನೇಕ ನದಿಗಳು ಈಗ ನೀರಿನ ಕಾಯಂ ಮೂಲಗಳಾಗಿವೆ; ಕೈಪಂಪುಗಳು ಕೆಲಸ ಮಾಡುತ್ತಿವೆ; ಹಳ್ಳಿಗಳಲ್ಲಿಯೇ ಸಂಪಾದನೆ ಮಾಡಬಹುದು.

ಈ ಪ್ರದೇಶದಲ್ಲಿ ಜೋಹಡ್‌ಗಳಿಂದ ಮೂಲಭೂತ ಪರಿವರ್ತನೆ ಆಗಿರುವುದನ್ನು ರಾಜೇಂದ್ರ ಸಿಂಗ್ ಸುಲಭವಾಗಿ ತಿಳಿದುಕೊಂಡರು. ಆದರೆ ಮಣ್ಣಿನ ಈ ಕಟ್ಟೆಗಳನ್ನು ಕಟ್ಟಬೇಕಾದರೆ ಜನರ ಭಾಗಿತ್ವವಿಲ್ಲದೆ ಸಾಧ್ಯವಿಲ್ಲ. ಮಳೆಯ ನೀರು ಹರಿದುಹೋಗದಂತೆ ತಡೆಯುವ ಜೋಹಡ್‌ಗಳನ್ನು ಕಟ್ಟುವುದು ಮತ್ತು ಹಳೆಯ ಜೋಹಡ್‌ಗಳನ್ನು ರಿಪೇರಿ ಮಾಡುವುದು ಸುಲಭದ ಕೆಲಸವಾಗಿರಲಿಲ್ಲ ನಿಧಾನವಾಗಿ ಮತ್ತು ದೃಢವಾಗಿ ತರುಣ ಭಾರತ ಸಂಘವು ತನ್ನ ಸಾಹಸದಲ್ಲಿ ಮುಂದುವರಿಯಿತು. ಹಳ್ಳಿಯ ಹಿರಿಯರಿಂದ ಮಾರ್ಗದರ್ಶನ ಪಡೆಯುತ್ತಾ, ಯುವಕರಿಗೆ ಈ ಕೆಲಸದಲ್ಲಿ ಸೇರಿಕೊಳ್ಳುವಂತೆ ಪ್ರೇರಣೆ ಕೊಡುತ್ತಾ ಮುಂದೆ ಸಾಗಿತು. ಪ್ರಾರಂಭದ ವರ್ಷಗಳು ಈ ಸಂಘಕ್ಕೆ ಬಹಳ ಹೋರಾಟದ ವರ್ಷಗಳಾಗಿದ್ದವು. ೧೯೮೫-೮೬ ರಲ್ಲಿ ಭೀಕರ ಬರಗಾಲ ಬಿದ್ದಿತು. ಜನ ನಗರಗಳಿಗೆ ಗುಳೆ ಹೊರಟರು, ಆ ದುರಂತದ ಸಮಯವೇ ರಾಜೇಂದ್ರ ಸಿಂಗರ ನಂಬಿಕೆಯನ್ನು ಇನ್ನೂ ದೃಢಗೊಳಿಸಿತು, ಪರಂಪರಾಗತ ನೀರಿನ ಉಳಿತಾಯದ ತಂತ್ರಜ್ಞಾನವನ್ನು ಪುನಶ್ಚೇತನಗೊಳಿಸುವುದು ಅಗತ್ಯವೆಂಬ ಅವರ ನಂಬಿಕೆ ದೃಢವಾಯಿತು. ಪಟೇಲನಂಥ ಹಳ್ಳಿಯ ಹಿರಿಯರ ಸಲಹೆಗಳು ಬಹಳ ಉಪಯುಕ್ತ ಹಾಗೂ ಪ್ರಸ್ತುತವೆಂದೆನಿಸಿದವು. ವಿಚಿತ್ರವೆಂದರೆ ಆ ಸಲಹೆಗಳನ್ನು ಇಂಜಿನಿಯರುಗಳು ಮತ್ತು ತಂತ್ರಜ್ಞರು ಅರ್ಥಹೀನವೆಂದು ತಿರಸ್ಕರಿಸಿದ್ದರು. ಕಾಂಟೂರು ನಕಾಶೆಗಳಾಗಲೀ, ದೂರಸಂವೇದನಾ ಉಪಕರಣಗಳಾಗಲೀ ಹಳ್ಳಿಗರ ಸ್ಥಳೀಯ ಜ್ಞಾನವನ್ನು ಸರಿಗಟ್ಟಲಾರವು. ಹಳ್ಳಿಗರಿಗೆ ಎಲ್ಲಿ ತಡೆ ಅಣೆಗಳನ್ನು ಕಟ್ಟಬೇಕು ಮತ್ತು ಅವು ಯಾವ ಪ್ರಕಾರದ್ದಿರಬೇಕು ಎಂಬುದು ಬಹಳ ಚೆನ್ನಾಗಿ ಗೊತ್ತಿರುತ್ತದೆ.

ನಿಧಾನವಾಗಿ ಜನಸಮುದಾಯದ ನಂಬಿಕೆಯನ್ನು ಗಳಿಸುತ್ತ ಸಾಗಿತು. ಏಕೆಂದರೆ ಪ್ರಾರಂಭದಲ್ಲಿ ಜನರು ತರುಣ ಭಾರತ ಸಂಘವನ್ನು ಅಪನಂಬಿಕೆಯಿಂದಲೇ

ಕಂಡರು. ಈ ಸಂಘವು ಬೇರೆ ಇತರೆ ಗೈರು ಸರಕಾರಿ ಸಂಘಗಳಂತೆ ಬಂದಿದೆ ಮತ್ತು ಕ್ರಮೇಣ ಕಣ್ಮರೆಯಾಗುತ್ತದೆಂದೇ ಜನರು ಭಾವಿಸಿದ್ದರು. ಆದರೆ ಆ ರೀತಿ ಆಗ ಲಿಲ್ಲ. ಈ ಸಂಘವು ಅಲ್ಲಿಯೇ ಇರುವ ದೃಢ ನಿಶ್ಚಯ ಮಾಡಿತ್ತು. ಸಂಘದ ಸದಸ್ಯರು ಹಳ್ಳಿಗಳಲ್ಲಿಯೇ ವಾಸವಾಗಿದ್ದಗಷ್ಟೇ ಅಲ್ಲ, ಹಳ್ಳಿಗರ ಸುಖ ದುಃಖ ವನ್ನು ಹಂಚಿಕೊಂಡರು ಮತ್ತು ಆ ಪ್ರದೇಶದ ಭೂರಚನೆ, ಭೂಗುಣ ಇತ್ಯಾದಿಗಳನ್ನೂ ಹಾಗೂ ನೀರಿನ ಉಳಿತಾಯದ ಪದ್ಧತಿಗಳನ್ನೂ ತಿಳಿದುಕೊಂಡರು.

ಆ ಪ್ರದೇಶವನ್ನು ಎರಡು ಕ್ಷೇತ್ರಗಳಲ್ಲಿ ವಿಂಗಡಿಸಿದರು. ಒಂದು ಗುಡ್ಡ ಗಾಡು ಪ್ರದೇಶ, ಇನ್ನೊಂದು ಬಯಲು ಪ್ರದೇಶ. ಒಣ ಹವಾಮಾನ ಮತ್ತು ಕೇವಲ ೬೨೦ ಮಿಲಿಮೀಟರ್ ಸರಾಸರಿ ಮಳೆ ಇರುವ ಕಡೆ ಮತ್ತು ಪ್ರವಾಹ ಹಾಗು ಬರದ ಕಾರಣದಿಂದ ಭೂಮಿಯ ಗುಣಮಟ್ಟದ ಅವನತಿ ಆಗಿರುವಕಡೆ ಜನರ ಸಕ್ರಿಯ ಭಾಗಿದಾರಿ ಇಲ್ಲದೆ ಪ್ರಗತಿ ಸಾಧಿಸಲು ಸಾಧ್ಯವಿರಲಿಲ್ಲ. ಗೋಪಾಲಪುರ ದಲ್ಲಿ ವಿರೋಧವನ್ನು ಎದುರಿಸಬೇಕಾಗಿ ಬಂತು. ಏಕೆಂದರೆ ಅಲ್ಲಿಯ ಲೇವಾ ದೇವಿಗಾರರು ಈ ಯೋಜನೆಯನ್ನು ತಮ್ಮ ವೈರಿಯೆಂದು ಭಾವಿಸಿದರು. ಸರಕಾರಿ ಅಧಿಕಾರಿಗಳು ಮತ್ತು ಇತರರಲ್ಲಿ ಆಗಾಗ್ಗೆ ಘರ್ಷಣೆ ಗಳಾಗತ್ತಿದ್ದವು. ಆದರೆ ತರುಣ ಭಾರತ ಸಂಘವು ತನ್ನ ಉದ್ದೇಶ್ಯದೊಂದಿಗೆ ಮುಂದುವರಿಯುತ್ತಾ ಹೋಯಿತು.

ತರುಣ ಭಾರತ ಸಂಘವು ಕ್ರಮೇಣ ಸಮುದಾಯದ ಅಗತ್ಯಗಳು ಮತ್ತು ಅವುಗಳ ಪರಿಹಾರವನ್ನು ಆಧಾರವಾಗಿಟ್ಟುಕೊಂಡು ತನ್ನದೇ ಆದ ಕಾರ್ಯ ಕ್ರಮವನ್ನು ರೂಪಿಸಿಕೊಳ್ಳುತ್ತಾ ನಡೆಯಿತು. ಗ್ರಾಮಸಭೆಗಳೊಂದಿಗೆ ಸೇರಿ ಕೆಲಸ ಮಾಡುತ್ತಾ ಪ್ರತಿಯೊಂದು ಹಳ್ಳಿಗೂ ಅದರದರ ಮುಖ್ಯ ಅಗತ್ಯಗಳನ್ನು ಗುರುತಿಸುವಂತೆ ಮಾಡಿತು. ಅವುಗಳಲ್ಲಿ ಮುಖ್ಯವಾದವು ಮಣ್ಣಿನ ಅಣೆಕಟ್ಟು ಗಳು ಮತ್ತು ಉರುವಲು ಸೌದೆಗಾಗಿ ಕಾಡುಗಳ ಸೃಷ್ಟಿ. ತರುಣ ಭಾರತ ಸಂಘದ ಅತಿಮುಖ್ಯ ಕಾಣಿಕೆ ಅರ್ವರಿ ಮತ್ತು ರೂಪಾರೆಲ್ ನದಿಗಳನ್ನು ಪುನಃ ಸಜೀವ ಗೊಳಿಸಿದ್ದು ಮತ್ತು ೪,೫೦೦ ಜೋಹದ್‌ಗಳನ್ನು ನಿರ್ಮಿಸಿದ್ದು. ಇದರಿಂದಾಗಿ ಇಡೀ ಪ್ರದೇಶದ ಪ್ರಕೃತಿ ಸಮತೋಲನ, ಅಲ್ಲಿಯ ಜನರ ಆರ್ಥಿಕ ಸ್ಥಿತಿ ಇತ್ಯಾದಿಗಳಲ್ಲಿ ಬಹಳಷ್ಟು ಬದಲಾವಣೆಯಾಯಿತು. ೧೯೯೬ ರಲ್ಲಿ ಕೇವಲ ಒಂಭತ್ತು ವರ್ಷಗಳಿಗೆ ಕಡಿಮೆ ಅವಧಿಯಲ್ಲಿ ನೀರಿನ ಸಂರಕ್ಷಣೆಯ ತಾಂತ್ರಿಕತೆಯ ಕಾರಣದಿಂದ ರೂಪಾರೇಲ್ ನದಿ ಇಡೀ ವರ್ಷ ಹರಿಯಲು ಪ್ರಾರಂಭಿಸಿತು. ಅದೇ ರೀತಿ ೧೯೮೭ ರಲ್ಲಿ ಎಲ್ಲ ಹಳ್ಳಿಗಳಲ್ಲಿ ಜೋಹದ್‌ಗಳನ್ನು ನಿರ್ಮಿಸು ವುದರ ಮೂಲಕ ಅರ್ವರಿ ನದಿಗೂ ಸಹ ಮರು ಹುಟ್ಟನ್ನು ಕೊಡಲಾಗಿತ್ತು.

ಇದರಿಂದಾಗಿ ಕಳೆದ ವರ್ಷ ೨೦೦೦ ನೇ ಇಸ್ವಿ ಮಾರ್ಚ್ ತಿಂಗಳಲ್ಲಿ ಸ್ವತಃ ರಾಷ್ಟ್ರಪತಿ ಶ್ರೀ ಕೆ. ನಾರಾಯಣನ್ ಹಮೀರಪುರ ಹಳ್ಳಿಗೆ ವಿಮಾನದಲ್ಲಿ ಬಂದು ಅಲ್ಲಿಯ ಜನರಿಗೆ ಅವರ ಅದ್ಭುತವಾದ ಮಳೆನೀರಿನ ಶೇಖರಣೆಯ ಉಪಾಯ, ಗ್ರಾಮೀಣ ಇಂಜಿನಿಯರಿಂಗ್ ಮತ್ತು ಅರ್ವರಿ ನದಿಯ ಪುನರುಜ್ಜೀವನದ ಕಾರಣಗಳಿಗಾಗಿ "ಡೌನ್-ಟು-ಅರ್ಥ್-ಜೋಸೆಫ್ ಸಿ. ಜಾನ್" ಪ್ರಶಸ್ತಿಯನ್ನು ದಯಪಾಲಿಸಿದರು.

ಇದು ತರುಣ ಭಾರತ ಸಂಘ ಮತ್ತು ಸ್ವತಃ ರಾಜೆಂದ್ರ ಸಿಂಗ್ ಅವರಿಗೆ ನಿಜವಾದ ಹೆಗ್ಗಳಿಯ ಸಂಗತಿಯಾಗಿತ್ತು. ಅವರ ಯಶಸ್ಸಿನ ಕಥೆಗಳು ಬೆಳಕಿಗೆ ಬರುತ್ತಿದ್ದಂತೆಯೇ ಮತ್ತು "ನೀರಿನ ಪಾದಯಾತ್ರೆ" ಗಳು ಜನಪ್ರಿಯವಾಗುತ್ತಿದ್ದಂತೆಯೇ ಈ ಅದ್ಭುತವಾದ ಕೆಲಸಕ್ಕೆ ಧನಸಹಾಯ ಹರಿದುಬರಲು ಪ್ರಾರಂಭಿಸಿತು.

೧೯೮೫ ರಲ್ಲಿ ರಾಜೇಂದ್ರಸಿಂಗ್ ಕೆಲವೇ ಕಾರ್ಯಕರ್ತರೊಂದಿಗೆ ಭಿಕಾಮಪುರ ಗ್ರಾಮಕ್ಕೆ ಬಂದಾಗ ಅಲ್ಲಿಯ ಸುತ್ತಲಿನ ಭೂಮಿ ಶುಷ್ಕ ಮತ್ತು ಮರಳುಗಾಡು ಆಗಿತ್ತು. ಈಗ ಅದೇ ಪ್ರದೇಶ ಹಸಿರಿನಿಂದ ಕಂಗೊಳಿಸುತ್ತಿದೆ. ಆಹಾರದ ಉತ್ಪಾದನೆ ನಾಲ್ಕರಷ್ಟು ಹೆಚ್ಚಾಗಿದೆ, ಹಾಲಿನ ಉತ್ಪಾದನೆ ದ್ವಿಗುಣಗೊಂಡಿದೆ. ಭಾವಿಗಳಲ್ಲಿ ಝರಿಗಳು ಕಾಣಿಸಿಕೊಂಡಿವೆ. ಈಗ ಮನುಷ್ಯರಿಗೂ, ದನಗಳಿಗೂ ಕುಡಿಯುವ ನೀರಿನ ಅಭಾವವಿಲ್ಲ. ರಾಜೇಂದ್ರ ಸಿಂಗ್ ಕೆಲಸ ಪ್ರಾರಂಭಿಸುವ ಮುನ್ನ ಅರಣ್ಯ ಪ್ರದೇಶದ ಪ್ರಮಾಣ ಕೇವಲ ಶೇಕಡಾ ೫ ರಷ್ಟು ಇತ್ತು. ಈಗ ಅದರ ಪ್ರಮಾಣ ೪೦ ರಷ್ಟು ಏರಿದೆ. ಹಸಿರುಮಯವಾಗಿರುವ ನೀಂಬಿ ಎಂಬ ಹಳ್ಳಿಯು ನೀರಿನ ಸಂರಕ್ಷಣಾ ವ್ಯವಸ್ಥೆಯ ಹಾಗೂ ತರುಣ ಭಾರತ ಸಂಘದ ಪ್ರಯತ್ನಗಳ ಯಶೋಗಾಥೆಯನ್ನು ಸಾರುತ್ತಿದೆ.

ಮೆಗಾಸಿಸೆ ಪ್ರಶಸ್ತಿ ಸ್ಥಳೀಯ ನೀರಿನ ಉಳಿತಾಯದ ತಂತ್ರಜ್ಞಾನಕ್ಕೆ ಸಂದ ಪ್ರಶಸ್ತಿ ಎಂದು ರಾಜೇಂದ್ರ ಸಿಂಗ್ ಭಾವಿಸುತ್ತಾರೆ. ★

("ಡೆಕ್ಕನ್ ಹೆರಾಲ್ಡ್" ಸಾಭಾರ : ಅನು : ಸು. ಕೌ.)

ವಾಚಕರಲ್ಲಿ ವಿನಂತಿ

"ಜನಪದ ವಿಚಾರ"ವನ್ನು ತಮ್ಮ ಸ್ನೇಹಿತರಿಗೂ, ಬಂಧುಗಳಿಗೂ ಪರಿಚಯ ಮಾಡಿಕೊಟ್ಟು ಅದರ ಅಭಿವೃದ್ಧಿಗೆ ಸಹಕರಿಸಬೇಕಾಗಿ ವಿನಂತಿ.

–ಪ್ರಕಾಶಕರು

ಪ್ರಾಥಮಿಕ ವಿಚಾರದತ್ತ

-ಪರ್ಸಾ ವೆಂಕಟೇಶ್ವರರಾವ್

(ರಾಜಕೀಯ ಸಮಸ್ಯೆಗಳನ್ನು ಅರ್ಥಪೂರ್ಣವಾಗಿ ಚರ್ಚಿಸಲು ಅಗತ್ಯವಾದ ಮೂಲ ಗ್ರಹಿಕೆಗಳೇ ಭಾರತೀಯ ಬುದ್ಧಿಜೀವಿಗಳಲ್ಲಿ ಇಲ್ಲವಾಗಿದೆ. ಈ ಕುರಿತು ವಿವರಣೆ ಇಲ್ಲಿದೆ. -ಸಂ)

ಭಾರತದಲ್ಲಿ ರಾಜಕೀಯ ವಿಶ್ಲೇಷಣೆ ಬಹಳ ಬಾಲಿಶವಾಗಿರುತ್ತದೆ. ಇದಕ್ಕೆ ಒಂದು ಕಾರಣವೇನೆಂದರೆ ನಾವು ಯಾವುದೇ ರಾಜಕೀಯ ತತ್ವಶಾಸ್ತ್ರವನ್ನು ಹೊಂದಿಲ್ಲದೇ ಇರುವುದು. ರಾಜಕೀಯ ಪಕ್ಷಗಳಂತೂ ಅದನ್ನು ಹೊಂದಿಯೇ ಇಲ್ಲ. ಭಾರತದಲ್ಲಿ ಕಮ್ಯುನಿಸ್ಟರು ಹೇಳಬಹುದು : "ಮಾರ್ಕ್ಸ್‌ನ ತತ್ವಶಾಸ್ತ್ರದಲ್ಲಿಯೇ ನಮ್ಮ ರಾಜಕೀಯ ತತ್ವಶಾಸ್ತ್ರವಿದೆ" ಎಂಬುದಾಗಿ. ಆದರೆ ಅದು ಸತ್ಯವಲ್ಲ. ಪಾಶ್ಚಿಮಾತ್ಯ ಮಾರ್ಕ್ಸ್‌ವಾದಿಗಳು ಪ್ಲಾಟೋನಿಂದ ಪ್ರಾರಂಭಿಸಿ ಅರಿಸ್ಟಾಟಲ್‌ನಿಂದ ಹೇಜಿಲ್‌ವರೆಗಿನ ಪರಂಪರೆಯ ಜೊತೆಗೆ ಸಂಪರ್ಕವಿರಿಸಿಕೊಂಡಿದ್ದಾರೆ. ಆದರೆ ಭಾರತೀಯ ಮಾರ್ಕ್ಸ್‌ವಾದಿಗಳು ತತ್ವಶಾಸ್ತ್ರವು ಮಾರ್ಕ್ಸ್‌ನಿಂದ ಹುಟ್ಟುತ್ತದೆ ಮತ್ತು ಮಾವೋನಲ್ಲಿ ಕೊನೆಗೊಳ್ಳುತ್ತದೆಂದು ನಂಬುವ ಸ್ವಭಾವದವರಾಗಿದ್ದಾರೆ. ಕಾಂಗ್ರೆಸ್ ಪಕ್ಷವಂತೂ ಯಾವುದೇ ರಾಜಕೀಯ ಸಿದ್ಧಾಂತವನ್ನು ಹೊಂದಿಲ್ಲ. ಮಹಾತ್ಮಾ ಗಾಂಧೀ ಜನಾಂದೋಲನಗಳನ್ನು ಸಂಘಟಿಸುವ ಸಮಯ ಬಂದಾಗ ಸೂಕ್ಷ್ಮ ಗ್ರಹಿಕೆಯ ಕುಶಾಗ್ರ ರಾಜಕಾರಣಿಯಾಗಿದ್ದರು. ಆದರೆ ಅವರು ಸಮಾಜ ಮತ್ತು ರಾಜ್ಯ ಕುರಿತು ರಾಜಕೀಯ ಸಿದ್ಧಾಂತವನ್ನು ಹೊಂದಿರಲಿಲ್ಲ. ರಾಮ ರಾಜ್ಯ ಕುರಿತು ಅವರು ಹೇಳಿರುವ ವಿಚಾರಗಳು ನಿರ್ದಿಷ್ಟತೆಯಿಂದ ಕೂಡಿರುವುದಿಲ್ಲ.

ಜವಾಹರಲಾಲ್ ನೆಹರು ರಾಜ್ಯಶಾಸ್ತ್ರವನ್ನು ಅಷ್ಟೊಂದು ಗ್ರಹಿಸಲಿಲ್ಲ. ಸಮಾಜವಾದದ ಕೆಲವು ಅಸ್ಪಷ್ಟ ವಿಚಾರಗಳನ್ನು ಮಾತ್ರ ಅವರು ತಿಳಿದುಕೊಂಡರು, ಭಾರತಕ್ಕೆ ರಾಜ್ಯಶಾಸ್ತ್ರವನ್ನು ತಂದು ಕೊಡಬಹುದಾಗಿದ್ದ ವ್ಯಕ್ತಿ ಒಬ್ಬರಿದ್ದರು : ಸರ್ವಪಳ್ಳಿ ರಾಧಾಕೃಷ್ಣನ್. ಆದರೆ ಅವರು ಪ್ಲಾಟೋ, ಕಾಂಟ್, ಹೆಜಿಲ್, ಉಪನಿಷತ್, ಶಂಕರ ಇವರ ತತ್ವಶಾಸ್ತ್ರಗಳನ್ನು ಬಹಳ ಆದರ್ಶಪ್ರಾಯವಾಗಿ ಮಾತ್ರ ಗ್ರಹಿಸಿದರು.

ಇದೆಲ್ಲದರ ಪರಿಣಾಮವಾಗಿ ರಾಜಕೀಯ ಸಮಾಜವನ್ನು ಕುರಿತು ಚರ್ಚಿಸಲು ಅಗತ್ಯವಾದ ಮೂಲಗ್ರಹಿಕೆಗಳೇ ನಮ್ಮ ಭಾರತೀಯ ಬುದ್ಧಿಜೀವಿಗಳಿಗಿಲ್ಲವಾಯಿತು. ರಾಜ್ಯಶಾಸ್ತ್ರವು ಪದವಿಪೂರ್ವ ಹಾಗೂ ಪದವಿಯೋತ್ತರ ಹಂತಗಳಲ್ಲಿ ಕಲಿಸಲ್ಪಡುತ್ತದೆಯಾದರೂ ಅದು ಭಾರತೀಯ ರಾಜಕಾರಣವನ್ನು

ಚರ್ಚಿಸಲು ಅಷ್ಟೊಂದು ಪ್ರಯೋಜನಕ್ಕೆ ಬರುವುದಿಲ್ಲವೆಂದು ಅನೇಕರು ಭಾವಿಸುತ್ತಾರೆ. ಭಾರತದಲ್ಲಿ ರಾಜಕೀಯ ವಿಜ್ಞಾನಿಗಳು ರಾಜಕೀಯ ಪಕ್ಷಗಳು, ಚುನಾವಣಾ ಫಲಿತಾಂಶಗಳು, ಜಾತಿ ಸಂಯೋಜನೆಗಳು ಮತ್ತು ಸ್ಥಳೀಯ ಸರ್ಕಾರಗಳು ಇತ್ಯಾದಿ ಮೇಲುಮೇಲಿನ ವಿಷಯಗಳನ್ನು ಸಂಗ್ರಹಿಸುವುದರಲ್ಲಿಯೇ ತನ್ಮಯರಾಗಿರುತ್ತಾರೆ. ಪೌರಸಭಾ ಆಡಳಿತವಾಗಲೀ, ಪಂಚಾಯತ್ ರಾಜ್ಯವಾಗಲೀ ಸರಿಯಾಗಿ ಕೆಲಸಮಾಡುತ್ತಿದೆಯೇ ಎಂಬುದನ್ನು ತೀರ್ಮಾನಿಸಲು ಅಗತ್ಯವಾದ ಯಾವ ಅಳತೆಗೋಲೂ ಆ ರಾಜಕೀಯ ತಜ್ಞರ ಬಳಿ ಇಲ್ಲ. ಆ ಕುರಿತು ತೀರ್ಮಾನ ಕೈಗೊಳ್ಳಬೇಕಾದರೆ ನಾವು ಸಮಾಜದ, ಸರ್ಕಾರದ ಮತ್ತು ರಾಜ್ಯದ ಉದ್ದೇಶಗಳೇನು, ಗುರಿಗಳೇನು ಎಂಬುದನ್ನು ಅರಿತಿರಬೇಕಾಗುತ್ತದೆ. ಜನತೆಯಿಂದಲೇ ರಾಜ್ಯವಾಗಿ ರೂಪಾಂತರಗೊಳ್ಳುವ ಆಧಿಪತ್ಯವನ್ನು ನಾವು ಹೊಂದಬೇಕೇ ಅಥವಾ ಸರ್ವವ್ಯಾಪಿಯಾದ ರಾಜ್ಯವನ್ನು ಹೊಂದಬೇಕೇ ಎಂಬುದನ್ನು ನಾವು ತೀರ್ಮಾನಿಸಬೇಕು. ಭಾರತದ ಅತ್ಯುತ್ತಮ ರಾಜಕೀಯ ವಿಜ್ಞಾನಿಗಳು ಅಭಿಪ್ರಾಯ ಪಡುವುದೇನೆಂದರೆ ಆಧಿಪತ್ಯವೆಂಬುದು ರಾಜ್ಯದ ಒಂದು ಮೂಲ ಸ್ವರೂಪವೇ ಹೊರತು ಜನತೆಯೊಂದಿಗೆ ಅದರ ಯಾವ ಸಂಬಂಧವೂ ಇಲ್ಲ.

ಇದು ಕಠೋರವೆನಿಸಬಹುದು. ಆದರೆ ಭಾರತೀಯ ರಾಜ್ಯಶಾಸ್ತ್ರದ ವಿದ್ಯಾರ್ಥಿಗಳು ಪ್ಲಾಟೊ, ಅರಿಸ್ಟಾಟಲ್, ಥಾಮಸ್ ಹೊಬಸ್, ಜಾನ್ ಲೋಕೆ, ಜೀನ್ ಜಾಕೊಸ್ ರೂಸ್ಸೊ, ಹೆಜೆಲ್ ಮತ್ತು ಹೆರಾಲ್ಡ್ ಲಾಸ್ಕಿ ಮುಂತಾದವರನ್ನು ಅಧ್ಯಯನ ಮಾಡಿ ಭಾರತೀಯ ರಾಜಕಾರಣ ಎದುರಿಸುತ್ತಿರುವ ಗುರಿ ಮತ್ತು ಚುನೌತಿಗಳನ್ನು ಆಳವಾಗಿ ಮತ್ತು ಅರ್ಥವತ್ತಾದ ಸಂದರ್ಭದೊಡನೆ ಚರ್ಚಿಸುವ ಸಾಮರ್ಥ್ಯ ಪಡೆದುಕೊಳ್ಳಬೇಕು. ಈ ಪ್ರತಿಯೊಬ್ಬ ಚಿಂತಕರು ನಮ್ಮನ್ನು ಸಮಾಜದ ಸರಳವಾದ ಮೂಲಕ್ಕೆ ಕರೆದೊಯ್ಯುವರು ಮತ್ತು ಅದೆಲ್ಲ ಹೇಗೆ ಪ್ರಾರಂಭವಾಯಿತು ಹಾಗೂ ಅದು ಏನನ್ನು ಸಾಧಿಸಬಯಸುತ್ತದೆ ಮುಂತಾದವುಗಳನ್ನು ತಿಳಿಸುವರು. ಆಗ ರಾಜ್ಯಶಾಸ್ತ್ರದ ವಿದ್ಯಾರ್ಥಿಗಳಿಗೆ ಆದರ್ಶ ರಾಜಕೀಯ ಸಮಾಜವನ್ನು ನಿರ್ಮಿಸಲು ಸಾಧ್ಯವೆಂದು ಯೋಚಿಸಲು ಮತ್ತು ಕೆಳಹಂತದ ರಾಜಕೀಯ ಕ್ರಿಯಾಚಟುವಟಿಕೆಗಳ ನಿಯಮಗಳನ್ನು ಗುರುತಿಸುವುದು ಅಗತ್ಯವೆಂದು ತಿಳಿಯಲು ಅನುಕೂಲವಾಗುವುದು. ಆದರೆ ಈ ವಿಷಯಕ್ಕೆ ಶಿಕ್ಷಣತಜ್ಞರು ಅಗತ್ಯವಾದ ಮಹತ್ವವನ್ನು ಕೊಡುತ್ತಿಲ್ಲ.

ಭಾರತದಲ್ಲಿಯ ಬಲಪಂಥೀಯ ಮತ್ತು ಎಡಪಂಥೀಯ ವಿಚಾರವಾದಿಗಳು ಈ ಗತಕಾಲದ ಶಾಂತಪೂರ್ಣ ಮತ್ತು ಧೀರೋದಾತ್ತ ರಾಜಕೀಯ

ಚಿಂತಕರ ಬರಹಗಳ ಬಗ್ಗೆ ಒಂದು ರೀತಿಯ ತಿರಸ್ಕಾರದ ಮನೋಭಾವವನ್ನು ಹೊಂದಿದ್ದಾರೆ. ಅಷ್ಟೇ ಅಲ್ಲ, ಆ ಹಿರಿಯರ ವಿಚಾರಗಳನ್ನು ತಿಳಿಯಲು ವಿದ್ಯಾರ್ಥಿಗಳನ್ನು ನಿಃಸಂಕೋಚವಾಗಿ ನಿರುತ್ಸಾಹಗೊಳಿಸುತ್ತಾರೆ. ಇದರ ಪರಿಣಾಮವಾಗಿ ಈ ಶಿಕ್ಷಣತಜ್ಞರು ದೇಶದಲ್ಲಿ ರಾಜಕೀಯ ಚಿಂತನೆಯ ಬರಡುತನಕ್ಕೆ ಕಾರಣರಾಗುತ್ತಿದ್ದಾರೆ. ಪ್ರತಿಯೊಬ್ಬ ಪ್ರಜೆಯೂ ರಾಜಕೀಯ ವಿಚಾರ ಮತ್ತು ತತ್ವಶಾಸ್ತ್ರಗಳ ಬಗ್ಗೆ ಸ್ವಲ್ಪವಾದರೂ ತಿಳಿದಿರಬೇಕೆಂಬ ಸಂಗತಿಯನ್ನೇ ಮರೆಯಲಾಗುತ್ತಿದೆ. ನಾಗರಿಕರು ಈ ವಿಷಯಗಳನ್ನು ತಿಳಿದುಕೊಂಡಲ್ಲಿ ಶಿಕ್ಷಣತಜ್ಞರು, ರಾಜಕಾರಣಿಗಳು ಮತ್ತು ನ್ಯಾಯಾಧೀಶರು ರಾಜಕಾರಣದ ಬಗ್ಗೆ ಏನು ಹೇಳುತ್ತಿದ್ದಾರೆ ಎಂಬುದನ್ನು ಕುರಿತು ತೀರ್ಮಾನಕೈಗೊಳ್ಳಲು ಸಮರ್ಥ ರಾಗುತ್ತಾರೆ.

ಭಾರತದ ಸಂವಿಧಾನವನ್ನು ರಚಿಸಿದ ಮಹನೀಯರು ಬಹಳ ಹಂತದ ವರೆಗೆ ಗತಕಾಲದ ರಾಜಕೀಯ ವಿಚಾರಗಳಲ್ಲಿ ತಜ್ಞರಾದಂಥವರೇ ಆಗಿದ್ದರು. ಆದ್ದರಿಂದಲೇ ಸಂವಿಧಾನ ರಚನಾ ಸಭೆಯ ಚರ್ಚೆಗಳಲ್ಲಿ ನಾವು ವಿವಿಧ ವ್ಯಾಖ್ಯೆಗಳ ಬಗ್ಗೆ ಮತ್ತು ಗ್ರಹಿಕೆಗಳ ಬಗ್ಗೆ ತೀವ್ರವಾದ ಚರ್ಚೆ ನಡೆದುದನ್ನು ಕಾಣುತ್ತೇವೆ. ಬಹುಶಃ ಈ ಚರ್ಚೆಗಳಲ್ಲಿ ಮಾತ್ರ ನಮಗೆ ಭಾರತದ ರಾಜಕೀಯ ವಿಚಾರಗಳು ದೊರೆಯುತ್ತವೆ. ಶಿಕ್ಷಿತರಾಗಿರುವ ಭಾರತೀಯರು ಈ ಚರ್ಚೆಗಳ ಸಾಹಿತ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರೆ ತಪ್ಪಾಗಲಾರದು.

ಈಗ ಸಾಮಾನ್ಯವಾಗಿ ರಾಜಕಾರಣಲ್ಲಿಯ ಆಸಕ್ತಿಯು ಯಾವ ನಾಯಕನು ಯಾವ ಜಾತಿಗೆ ಸೇರಿದವನು, ಯಾವ ಗುಂಪಿಗೆ ಸೇರಿದವನು ಮತ್ತು ಎಷ್ಟು ಬಾರಿ ಪಕ್ಷಾಂತರ ಮಾಡಿದ್ದಾನೆ ಇತ್ಯಾದಿ ವಿಷಯಗಳನ್ನು ತಿಳಿಯುವುದಕ್ಕಷ್ಟೇ ಸೀಮಿತವಾಗಿದೆ. ನಮ್ಮ ದೇಶದಲ್ಲಿ ಅನೇಕ ಜನರು ಈ ವಿವರಗಳನ್ನು ತಿಳಿದಿದ್ದಾರೆ ಮತ್ತು ರಾಜಕಾರಣದ ಜ್ಞಾನವೆಂದರೆ 'ಇದಿಷ್ಟೇ ಎಂದು ಭಾವಿಸಿದ್ದಾರೆ. ಅವರು ಪ್ರಾಥಮಿಕ ವಿಚಾರಗಳತ್ತ ಹೋಗುವುದೇ ಇಲ್ಲ. ಆದ್ದರಿಂದಲೇ ನಮ್ಮ ಸಂಸತ್ ಸದಸ್ಯರು ರಾಜಕೀಯ ಆದರ್ಶಗಳ ಬಗೆ ಮಾತನಾಡುವುದು ಕಾಣುವುದೇ ಇಲ್ಲ ಮತ್ತು ಮತದಾರರು ಸಹ ಅವರಿಂದ ಅದನ್ನು ನಿರೀಕ್ಷಿಸುವುದಿಲ್ಲ. ವಿಶ್ವವಿದ್ಯಾಲಯಗಳಲ್ಲಿ ರಾಜಕಾರಣವನ್ನು ಬೋಧಿಸುವ ಶಿಕ್ಷಣತಜ್ಞರು ಈ ಬಗ್ಗೆ ಸ್ಪಷ್ಟವಾದ ಮೌನಧಾರಣ ಮಾಡಿದ್ದಾರೆ.

ಸ್ವಾತಂತ್ರ್ಯ, ನ್ಯಾಯ ಮತ್ತು ಸಮಾನತೆಯಂಥ ಪ್ರಶ್ನೆಗಳನ್ನು ನಾವು ಎತ್ತಿಕೊಳ್ಳದಿದ್ದರೆ ನಾವು ಒಳ್ಳೆಯ ಸಮಾಜವನ್ನು ನಿರ್ಮಿಸಲಾರೆವು. ಈ

ವಿಚಾರಗಳ ಚಿಂತನೆಯಲ್ಲಿಯೇ ತಮ್ಮ ಸಮಯವನ್ನು ಉಪಯೋಗಿಸಿದ ಆ ಹಿರಿಯರ ಸನಿಯಕ್ಕೆ ನಾವು ಹೋಗಬೇಕಾದುದು ಅಗತ್ಯ. ಪ್ಲಾಟೋ ಮತ್ತು ಆರಿಸ್ಟಾಟಲ್ ಇವರಿಬ್ಬರ ರಾಜಕೀಯ ಅನುಭವ ಗ್ರೀಸ್ ದೇಶದ ಚಿಕ್ಕ ನಗರ ರಾಜ್ಯಗಳಿಗೆ ಸೀಮಿತವಾಗಿತ್ತೆಂಬ ಸಂಗತಿಯನ್ನು ಉದಾಸೀನ ಮಾಡುವುದು ಕಷ್ಟವಾಗುತ್ತದೆ.

ಹೊಬಸ್, ಲೋಕೆ ಮತ್ತು ರೂಸ್ಸೊ ನಮಗಿಂತಲೂ ಭಿನ್ನವಾದ ಕಾಲದಲ್ಲಿ ಇದ್ದರೆಂಬುದು ನಮಗೆ ಗೊತ್ತಿದೆ. ಆದರೆ ಸಮಾಜ ಮತ್ತು ರಾಜ್ಯ ಪದ್ಧತಿ ಕುರಿತು ಅವರು ಕೆಲವು ಮೂಲಭೂತ ಪ್ರಶ್ನೆಗಳನ್ನು ಎತ್ತಿದ್ದರು. ಅವರು ಹೇಳಿದ ಮಾತುಗಳನ್ನು ನಾವು ಓದಿದರೆ ನಮ್ಮ ಇಂದಿನ ರಾಜಕೀಯ ಸಮಾಜವನ್ನು ಕುರಿತು ಸರಿಯಾದ ಪ್ರಶ್ನೆಗಳನ್ನು ಹಾಕಲು ನಾವು ಕಲಿಯುತ್ತೇವೆ.

ರಾಜ್ಯಶಾಸ್ತ್ರದ ವಿದ್ಯಾರ್ಥಿಗಳು ಮತ್ತು ಬೇರೆ ನಾಗರಿಕರು ರಾಜ್ಯಶಾಸ್ತ್ರವನ್ನು ಸ್ವಲ್ಪ ಪ್ರಮಾಣದಲ್ಲಿಯೇ ಆಗಲಿ ಅಧ್ಯಯನ ಮಾಡಿದಲ್ಲಿ ಭಾರತೀಯ ಪ್ರಜಾಪ್ರಭುತ್ವವು ಗುಣಾತ್ಮಕವಾಗಿ ಭಿನ್ನವಾಗುವುದು. ರಾಜ್ಯದ ಉದ್ದೇಶ್ಯ ವೇನು? ರಾಜ್ಯವನ್ನು ಯಾರು ರಚಿಸುತ್ತಾರೆ? ರಾಜ್ಯವನ್ನು ನಿಯಂತ್ರಿಸುವ ಮಾರ್ಗಗಳು ಯಾವುವು? ರಾಜ್ಯವೆಂದರೆ ದೇವರೆಂಬುದಾಗಿ ಭಾವಿಸುವುದು ಅಗತ್ಯವೆ? ರಾಜ್ಯದ ದಯಾಪರ ರಕ್ಷಣೆಯನ್ನವಲಂಬಿಸದೆ ನಾವು ಒಳ್ಳೆಯ ಜೀವನವನ್ನು ನಡೆಸಲಾರೆವೆ? ಇಂಥ ಪ್ರಶ್ನೆಗಳನ್ನು ಕೇಳುವುದು ನಮಗೆ ಗೊತ್ತಾದರೆ ಅರೆಬೆಂದ ರಾಜಕಾರಣಿಗಳ ತಪ್ಪುದಾರಿಗೆಳೆಯುವ ವಾದವನ್ನು ಎದುರಿಸಬಹುದು. ರಾಜ್ಯಶಾಸ್ತ್ರದ ಚಿಂತಕರ ವಿಚಾರಗಳನ್ನು ನಾವು ತಿಳಿದುದೇ ಆದರೆ ರಾಜಕಾರಣಿಗಳಿಗೆ ನಮ್ಮನ್ನು ಮೋಸಮಾಡಲು ಸಾಧ್ಯವಾಗುವುದಿಲ್ಲ.

'(ಸಂಡೆ ಎಕ್ಸ್‌ಪ್ರೆಸ್' ಸಾಭಾರ :)
ಅನು : ಸು ಕೌ

ಓದುಗರಲ್ಲಿ ಮತ್ತು ಲೇಖಕರಲ್ಲಿ ಅರಿಕೆ

ಜನಪದ ವಿಚಾರದಲ್ಲಿ ಪ್ರಕಟಗೊಂಡಿರುವ ಲೇಖನಗಳಲ್ಲಿಯ ವಿಚಾರಗಳ ಬಗ್ಗೆ ಓದುಗರು ತಮ್ಮ ಅನಿಸಿಕೆ, ಅಭಿಪ್ರಾಯ ಇತ್ಯಾದಿಗಳನ್ನು ತಿಳಿಸಬೇಕಾಗಿ ಕೋರಿಕೆ. ಅವುಗಳನ್ನು ಪ್ರಕಟಿಸಲಾಗುವುದು.

ಲೇಖಕರು ಸ್ವಂತ ವೈಚಾರಿಕ ಕೃತಿಗಳನ್ನೂ, ಅನುವಾದಿತ ಕೃತಿಗಳನ್ನೂ ಪ್ರಕಟಣೆಗಾಗಿ ಕಳುಹಿಸಬೇಕಾಗಿ ಕೋರಿಕೆ.

ಮಾನವನೇ ಮಾನವಕುಲವನ್ನು ನಾಶಮಾಡಿದಾಗ!

– ಕೆ. ಅಶೋಕವರ್ಧನ ಶೆಟ್ಟಿ

"ಇತಿಹಾಸ ಹೆಚ್ಚಾಗಿ ಠಕ್ಕರಾದ ಆಡಳಿತಗಾರರಿಂದಲೂ, ಹೆಚ್ಚಾಗಿ ಮೂರ್ಖರಾದ ಸೈನಿಕರಿಂದಲೂ ನಡೆದ ಹೆಚ್ಚಾಗಿ ಅಬದ್ಧವಾದ ಮತ್ತು ಹೆಚ್ಚಾಗಿ ಮಹತ್ವವಲ್ಲದ ವರ್ಣನೆಯಾಗಿದೆ. – ಆಂಬ್ರೋಸ್ ಬೈರ್ಸ್

೧೯೭೫ ಏಪ್ರಿಲ್. ದುಷ್ಟ ಪೋಲ್ ಪಾಟ್ ಕಾಂಬೋಡಿಯಾದಲ್ಲಿ ಮಾವೋ ಕ್ರಾಂತಿಕಾರಿಗಳ ನಾಯಕನಾಗಿದ್ದ. ಅವನು ಆ ವರ್ಷವನ್ನು ಕ್ರಾಂತಿ ವರ್ಷ ಎಂದು ಕರೆದ. ಆ ದೇಶದ ನಗರಗಳಲ್ಲಿ, ಪಟ್ಟಣಗಳಲ್ಲಿ ಇದ್ದ ಪ್ರತಿಯೊಬ್ಬರನ್ನೂ – ಯುವಕ ಮತ್ತು ವೃದ್ಧರಾದಿಯಾಗಿ – ಎಲ್ಲರನ್ನೂ ಹಳ್ಳಿಗಾಡಿಗೆ ತಳ್ಳಿ ಅವರು ಅಲ್ಲಿ ಸಾಮೂಹಿಕ ಹೊಲಗಳಲ್ಲಿ ಬಲವಂತವಾಗಿ ಕೆಲಸ ಮಾಡುವಂತೆ ಮಾಡಿದ; ಖಾಸಗಿ ಆಸ್ತಿಯನ್ನೂ, ಮಾರುಕಟ್ಟೆಯನ್ನೂ, ಬ್ಯಾಂಕುಗಳನ್ನೂ, ನಾಣ್ಯವನ್ನೂ, ಪತ್ರಿಕೆಗಳನ್ನೂ, ಶಾಲೆಗಳನ್ನೂ, ಆಸ್ಪತ್ರೆಗಳನ್ನೂ ಮತ್ತು ಧರ್ಮವನ್ನೂ ರದ್ದುಗೊಳಿಸಿದ. ಅವನಿಗೆ ಬುದ್ಧಿಜೀವಿಗಳನ್ನು ಕಂಡರಾಗುತ್ತಿರಲಿಲ್ಲ. ಆದ್ದರಿಂದ ಅವರಲ್ಲಿ ಬಹಳಷ್ಟು ಜನರನ್ನು ವ್ಯವಸ್ಥಿತವಾಗಿ ನೇಣು ಹಾಕಿದ. ಯಾರು ಅವನ ಕಲ್ಪನೆಯ ರೈತ ರಾಜ್ಯವನ್ನು ಕಟ್ಟಲು ಸಹಕರಿಸುತ್ತಿರಲಿಲ್ಲವೋ ಅಂಥವರನ್ನು ಸಂಪೂರ್ಣವಾಗಿ ಹೇಳಹೆಸರಿಲ್ಲದಂತೆ ಮಾಡುತ್ತಿದ್ದ. ಸುಮಾರು ಹತ್ತು ಲಕ್ಷದ ಏಳು ಸಾವಿರ ಜನ ಅಂದರೆ ಆ ದೇಶದ ಶೇಕಡಾ ೨೫ ರಷ್ಟು ಜನಸಂಖ್ಯೆ ಕಂಬೋಡಿಯಾದ ಬಯಲಲ್ಲಿ ಹತರಾದರು. ಮುಂದೆ ೧೯೭೮ರಲ್ಲಿ ವಿಯಾಟ್ನಾಂವಿಗಳು ದಾಳಿ ಮಾಡಿ ಆ ಮಾವೋ ಕ್ರಾಂತಿಕಾರಿಗಳನ್ನು ಹೊಡೆದೋಡಿಸಿದರು. ೧೯೯೮ರಲ್ಲಿ ಪೋಲ್ ಪಾಟ್ ಕಾಡಿನ ಒಂದು ಶಿಬಿರದಲ್ಲಿ ಸತ್ತ. ಆ ವೇಳೆಗೆ ಅವನನ್ನು ಅವನ ಹಿಂಬಾಲಕರೇ ತೊರೆದಿದ್ದರು. ಆದರೆ ಯಾವ ಕಾನೂನೂ ಅವನನ್ನು ಮುಟ್ಟಲಿಲ್ಲ.

ಮಾನವ ಇತಿಹಾಸದ ತುಂಬೆಲ್ಲ ಅನೇಕ ಬಗೆಯ ಪ್ರಜಾಕಂಟಕರು ಸಾಮೂಹಿಕ ಕೊಲೆ ಮಾಡಿಹೋಗಿದ್ದಾರೆ. ಈ ವಿಷಯದಲ್ಲಿ ತಜ್ಞರಾಗಿರುವ ಹವಾಯ್ ವಿಶ್ವವಿದ್ಯಾಲಯದ ಪ್ರೊ॥ ಆರ್.ಜೆ. ರುಮ್ಮೆಲ್ ಹೀಗೆ ಹೇಳಿದ್ದಾರೆ, "ಯುದ್ಧವೇ ಮಾನವಕುಲದ ಅತ್ಯಂತ ಪ್ರಮುಖ ಹತ್ಯಾಯಂತ್ರವೆಂದು ವಿಶ್ವ ತಿಳಿದಿರುವುದು ತಪ್ಪು." ಯುದ್ಧ ಅನೇಕ ರೂಪಗಳಲ್ಲಿ - ಅಂತರ್‌ರಾಷ್ಟ್ರೀಯ ಆಂತರಿಕ, ಗೆರಿಲ್ಲಾ, ಕ್ರಾಂತಿ ಇತ್ಯಾದಿಯಾಗಿ ನಡೆದು ಲಕ್ಷಾಂತರ ಜನರನ್ನು ಸಾಯಿಸಿದೆ ಎಂಬುದೇನೋ ನಿಜ, ಆದರೆ ಮನುಷ್ಯ ತನ್ನವರನ್ನೇ ಕೊಲ್ಲುವ

ಪ್ರವೃತ್ತಿಯ ಮೂಲಕ ಇದುವರೆಗೆ ಇತಿಹಾಸದಲ್ಲಿ ಆಗಿ ಹೋದ ಎಲ್ಲ ಯುದ್ಧಗಳಲ್ಲಿಯ ಸಾವುಗಳಿಗಿಂತ ನಾಲ್ಕು ಪಟ್ಟು ಹೆಚ್ಚು ಸಾವುಗಳನ್ನು ಉಂಟುಮಾಡಿದ್ದಾನೆ. ಆದಾಗ್ಯೂ ಅವುಗಳ ಬಗ್ಗೆ ಗಮನ ಕಡಿಮೆಯೇ ಇದೆ.

ಅನೇಕ ಜನರು ಪೊಲ್ ಪೊಟ್‌ನಂಥ ಹುಚ್ಚ ಮಾತ್ರ ಇಂಥ ಸಹಮಾನವ ಹತ್ಯೆಗಳನ್ನು ಮಾಡುತ್ತಾನೆ ಎಂಬುದಾಗಿ ತಿಳಿದಿದ್ದಾರೆ. ಆದರೆ ಸಾಮಾನ್ಯರೂ ಕೂಡ ಪ್ರತಿಕೂಲವಾದ ಪರಿಸ್ಥಿತಿಯಲ್ಲಿ ಸಹಮಾನವರನ್ನು ಬಲಿತೆಗೆದುಕೊಂಡ ನೂರಾರು ಉದಾಹರಣೆಗಳು ಇತಿಹಾಸದ ತುಂಬ ಇವೆ. ನಮ್ಮ ರಕ್ತರಂಜಿತವಾದ ಚರಿತ್ರೆಯಲ್ಲಿ ಬಹಳಷ್ಟು ಅಲ್ಪಸಂಖ್ಯಾತ ಸಮುದಾಯಗಳು ಪೂರ್ಣವಾಗಿ ಇಲ್ಲವೆ ಆಂಶಿಕವಾಗಿ ನಾಶಮಾಡಲ್ಪಟ್ಟಿವೆಯೆಂಬ ಸಂಗತಿಗಳನ್ನು ನಾವು ಸಾಮಾನ್ಯವಾಗಿ ಮರೆಯುತ್ತೇವೆ: ಇನ್ನು ಮುಂದೆ ಸಹಮಾನವ ಹತ್ಯೆ ಎಲ್ಲಿ ಆಗಬಹುದೆಂಬ ಬಗ್ಗೆ ಹಾಗೂ ಅದನ್ನು ತಡೆಯುವುದು ಹೇಗೆ ಎಂಬ ಬಗ್ಗೆ ನಾವು ಸ್ವಲ್ಪವೂ ಜಾಗರೂಕರಾಗಿರುವುದಿಲ್ಲ.

ವಿಜ್ಞಾನಿಗಳ ಪ್ರಕಾರ ಭಾಷೆ, ಕಲೆ, ಉಪಕರಣ ಮತ್ತು ವ್ಯವಸಾಯದಂತೆಯೇ ಸಹಮಾನವ ಹತ್ಯೆಯೂ ಕೂಡ ಮನುಷ್ಯರ ಮುಖ್ಯ ಲಕ್ಷಣಗಳಲ್ಲಿ ಒಂದಾಗಿದೆ. ಬೇರೆಲ್ಲ ಪ್ರಾಣಿಗಳಲ್ಲಿ ತಮ್ಮದೇ ಜಾತಿಗೆ ಸೇರಿದ ಪ್ರಾಣಿಗಳನ್ನು ಹತ್ಯೆ ಮಾಡಬಾರದೆಂಬ ನೀತಿಯು ಅವುಗಳ ಜೀವವಾಹಿನಿಯಲ್ಲಿಯೇ ಇದೆ. ಆದರೆ ಅಂಥ ನೀತಿ ಸಂಹಿತೆ ಮಾನವನಲ್ಲಿ ಇಲ್ಲ; ನಮ್ಮ ಜಾಣ್ಮೆ ಮತ್ತು ನೀತಿ ಇವು ಯಾವವೂ ನಮ್ಮ ಸಹಮಾನವ ಹತ್ಯಾ ಮನೋಭಾವವನ್ನು ನಿಯಂತ್ರಿಸಲು ಸಾಧ್ಯವಾಗಿಲ್ಲ. ಬದಲಿಗೆ, ನಮ್ಮ ಸಹಮಾನವ ಹತ್ಯೆಯ ಮನೋಭಾವದ ಜೊತೆ ವ್ಯಾಪಕ ವಿನಾಶಕಾರಿ ಅಸ್ತ್ರಗಳೂ ಜೊತೆಗೂಡಿ ನಮ್ಮ ಮಾನವಜಾತಿಯ ಉಳಿವಿಗೇ ಸಂಚಾಕಾರ ಬಂದಿದೆ.

ಇಂಗ್ಲೀಷ್ ಭಾಷೆಯಲ್ಲಿ ಸಹಮಾನವ ಹತ್ಯೆಗೆ ಇರುವ ಶಬ್ದ ಜಿನೋಸೈಡ್ (genocide). ಗ್ರೀಕ್ ಭಾಷೆಯ ಶಬ್ದವಾದ ಜಿನೋಸ್‌ನ ಅರ್ಥ ಕುಲ, ದೇಶ ಅಥವಾ ಸಮೂಹವೆಂದು. ಲಾಟಿನ್ ಭಾಷೆಯ ಶಬ್ದ ಸೈಡ್ (cide) ಅರ್ಥ ಕೊಲ್ಲುವುದು. ಈ ಶಬ್ದದ ರಚನೆಯನ್ನು ರಾಫೆಲ್ ಲೆಮ್‌ಕಿನ್ ಎಂಬ ಪೊಲಿಶ್-ಅಮೇರಿಕನ್ ವಿದ್ವಾಂಸ ೧೯೪೪ ರಲ್ಲಿ ಮಾಡಿದ. ಇದಕ್ಕೆ ಪ್ರಚೋದನೆ ೧೯೩೩-೪೫ನೇ ಇಸ್ವಿಗಳಲ್ಲಿ ಅಡೋಲ್ಫ್ ಹಿಟ್ಲರನ ಅಧೀನದಲ್ಲಿದ್ದ ನಾಝಿಗಳು ೬೦ ದಶಲಕ್ಷ ಯಹೂದ್ಯರನ್ನೂ, ಒಂದೂವರೆ ದಶಲಕ್ಷ ಅಲೆಮಾರಿಗಳನ್ನೂ ಮತ್ತು 'ಬೇಡವಾದ' ಲಕ್ಷಾಂತರ ಜನರನ್ನೂ ಹತ್ಯೆಮಾಡಿದ್ದು. ಆಗ ಈ ಸಹಮಾನವ ಹತ್ಯೆ – ಜಿನೋಸೈಡ್ – ಎಂಬ ಶಬ್ದ ಹುಟ್ಟಿತು. ಹಿಟ್ಲರ್ ಎರಡನೇ

ಮಹಾಯುದ್ಧದಲ್ಲೇನೋ ಸೋತ. ಆದರೆ ಶೇಕಡಾ ೭೫ ರಷ್ಟು ಐರೋಪ್ಯ ಯಹೂದ್ಯರನ್ನು ಕೊಲೆ ಮಾಡಿ "ಯಹೂದ್ಯರ ಸಮಸ್ಯೆಗೆ ಅಂತಿಮ ಪರಿಹಾರ" ಕಂಡುಕೊಳ್ಳುವಲ್ಲಿ ಯಶಸ್ವಿಯಾಗಿದ್ದ. ಸಾಯುವಂತೆ ಮಾಡಿದರು,

ಸಂಯುಕ್ತರಾಷ್ಟ್ರ ಸಂಸ್ಥೆಯು ೧೯೪೮ರಲ್ಲಿ ಸಹಮಾನವ ಹತ್ಯೆಯ ತಡೆಯುವಿಕೆ ಮತ್ತು ಶಿಕ್ಷೆ ಕುರಿತಾದ ಒಂದು ಸಂಹಿತೆಯನ್ನು ಜಾರಿಗೊಳಿಸಿತು. ಆ ಮೇರೆಗೆ ಸಹಮಾನವ ಹತ್ಯೆಯನ್ನು ಅಂತರ್‌ರಾಷ್ಟ್ರೀಯ ಕಾನೂನಿನ ಪ್ರಕಾರ ಒಂದು ಅಪರಾಧವೆಂದು ಘೋಷಿಸಿತು. ಆದರೂ ಕೂಡ ೨೦ನೇ ಶತಮಾನದ ಅರ್ಧ ಭಾಗದಲ್ಲಿ ಸಹಮಾನವ ಹತ್ಯೆಯ ೨೫ ಪ್ರಕರಣಗಳಾದವು. ಅವುಗಳನ್ನು ನಿಲ್ಲಿಸುವುದು ವಿಶ್ವರಾಷ್ಟ್ರ ಸಂಸ್ಥೆಗೆ ಸಾಧ್ಯವಾಗಲಿಲ್ಲ. ೧೯೭೦ ರಲ್ಲಿ ಇದಿ ಆಮೀನ್ ೧ ಲಕ್ಷದಿಂದ ೩ ಲಕ್ಷ ಜನರ ಸಹಮಾನವ ಹತ್ಯೆಯನ್ನು ಮಾಡಿದ. ಈ ಬಗ್ಗೆ ವಿಶ್ವರಾಷ್ಟ್ರ ಸಂಸ್ಥೆಗೆ ದೂರು ಸಲ್ಲಿಸಿದರ ಆ ಬಗ್ಗೆ ಆ ಸಂಸ್ಥೆ ಇದಿ ಆಮೀನ್‌ಗೇನೇ ತನಿಖೆ ನಡೆಸಲು ಹೇಳಿತು! ಸಂವಿಧಾನಕ್ಕೆ ಬದ್ಧರಾಗಿರುವವರಿಂದಾಗಲೀ, ಸಾರ್ವಜನಿಕ ಅಧಿಕಾರಿಗಳಿಂದಾಗಲೀ ಅಥವಾ ಖಾಸಗೀಯವರಿಂದಾಗಲೀ ಸಹಮಾನವ ಹತ್ಯೆ ನಡೆದರೆ ಅವರು ಶಿಕ್ಷೆಗೆ ಅರ್ಹರಾಗುತ್ತಾರೆ. ೧೯೩೨-೩೩ ರಲ್ಲಿ ಸ್ಟಾಲಿನ್ ಯುಕ್ರೈನ್ ರಾಜ್ಯದಲ್ಲಿ ಬೆಳೆಗಳನ್ನು ನಾಶಮಾಡಿ ಉದ್ದೇಶಪೂರ್ವಕವಾಗಿಯೇ ಕೃತ್ರಿಮವಾದ ಬರಗಾಲವನ್ನುಂಟು ಮಾಡಿ ಮೂರರಿಂದ ಐದು ದಶಲಕ್ಷ ಜನರು ಸಾಯುವಂತೆ ಮಾಡಿದ್ದು ಸಹಮಾನವ ಹತ್ಯೆಯಾಗಿತ್ತು; ಜಿಪ್ಸಿಗಳಲ್ಲಿ ಬಲವಂತವಾಗಿ ನಂಪುಸಕತ್ವವನ್ನು ತಂದು ಆ ಜನಾಂಗದ ಸಂತತಿ ಬೆಳೆಯದಂತೆ ಮಾಡಿದ ಹಿಟ್ಲರನ ಕೃತ್ಯವೂ ಸಹಮಾನವ ಹತ್ಯೆಯಾಗಿತ್ತು; ೧೯೭೦ರ ವರೆಗೆ ಆಸ್ಟ್ರೇಲಿಯಾ ಸರ್ಕಾರವು ಸಾಮಾಜಿಕ ಜೀವತಂತ್ರಜ್ಞಾನದ ಅಧ್ಯಯನದ ಅಂಗವಾಗಿ ಮೂಲನಿವಾಸಿಗಳ ಮಕ್ಕಳನ್ನು ಅವುಗಳ ತಂದೆ-ತಾಯಿಗಳಿಂದ ದೂರ ಮಾಡಿದ್ದು ಕೂಡ ಸಹಮಾನವ ಹತ್ಯೆಯೇ ಆಗಿತ್ತು; ವಿಶ್ವರಾಷ್ಟ್ರ ಸಂಸ್ಥೆಯ ಸಂಹಿತೆಯು "ರಾಜಕೀಯ ಸಮೂಹ"ಗಳನ್ನು ಸಹಮಾನವ ಹತ್ಯೆಯ ವ್ಯಾಖ್ಯೆಯಿಂದ ಹೊರಗಿಟ್ಟಿರುವುದು ಒಂದು ದೊಡ್ಡ ದೋಷವಾಗಿದೆ.

ಜೀನ್ ಪಾಲ್ ಸಟ್ರ್ಯೆ ಎಂಬಾತನು ತನ್ನ ಪ್ರಬಂಧವೊಂದರಲ್ಲಿ ಹೀಗೆ ಹೇಳಿದ್ದಾನೆ, "ಸಹಮಾನವ ಹತ್ಯೆ ಎಂಬ ಶಬ್ದವು ಹೊಸ ಶಬ್ದವಾಗಿರಬಹುದು. ಆದರೆ ಆ ಸಂಗತಿ ಮಾತ್ರ ಮಾನವಕುಲದಷ್ಟೇ ಹಳೆಯದಾಗಿದೆ. ಈ ಅಪರಾಧ ನಡೆಯದಂತೆ ತಡೆಯುವ ಸಾಮರ್ಥ್ಯವುಳ್ಳ ಯಾವ ಸಮಾಜವೂ ಇದುವರೆಗೆ ರಚಿತವಾಗಿಲ್ಲ." ಹಳೇ ಒಡಂಬಡಿಕೆಯಲ್ಲಿ ಗೆದ್ದ ಜನರು ಸೋತವರ ಮೇಲೆ

ಮಾಡಿದ ಸಹಮಾನವ ಹತ್ಯೆಯ ಅನೇಕ ಕಥೆಗಳಿದೆ. ಯಹೂದ್ಯರೂ ಸಹ ತಮ್ಮ ಕೈಯಲ್ಲಿ ಅಧಿಕಾರವಿದ್ದಾಗ ಅದೇ ಕೃತ್ಯವನ್ನು ಮಾಡಿದ ಕಥೆಗಳಿವೆ. ಪ್ರೊ|| ರುಮ್ಮೆಲ್ ಪ್ರಕಾರ ೨೦ ನೇ ಶತಮಾನದ ಪ್ರಾರಂಭದವರೆಗೆ ಎಲ್ಲ ಯುದ್ಧಗಳಿಂದ ೪೦ ದಶಲಕ್ಷ ಜನರು ಕೊಲ್ಲಲ್ಪಟ್ಟಿದ್ದರೆ ಸಹಮಾನವ ಹತ್ಯೆಯಿಂದ ೧೩೩ ದಶಲಕ್ಷ ಜನರು ಕೊಲ್ಲಲ್ಪಟ್ಟಿದ್ದಾರೆ, ಸ್ವತಃ ೨೦ ನೇ ಶತಮಾನದ ಯುದ್ಧಗಳಲ್ಲಿ ೩೭ ದಶಲಕ್ಷ ಮತ್ತು ಸಹಮಾನವ ಹತ್ಯೆಗಳಲ್ಲಿ ೧೭೦ ದಶಲಕ್ಷ ಜನರು ಕೊಲ್ಲಲ್ಪಟ್ಟಿದ್ದಾರೆ. (ಇವುಗಳಲ್ಲಿ ರಾಜಕೀಯ ಕೊಲೆಗಳೂ ಸೇರಿವೆ.) ೧೨೨೦ ರಲ್ಲಿ ಚೆಂಗೀಜ್‌ಖಾನ್ ೧.೭೫ ದಶಲಕ್ಷ ಪರ್ಶಿಯನ್ನರನ್ನು ಕೊಲೆ ಮಾಡಿದುದಲ್ಲದೆ, ಹೆರಾಡ್‌ನಲ್ಲಿ ೧.೬, ಮೆರ್ವನಲ್ಲಿ ೧.೩ ದಶಲಕ್ಷ ಮತ್ತು ಮೇರು ಚಾಹಜನ್‌ನಲ್ಲಿ ೧.೩ ದಶಲಕ್ಷ ಜನರನ್ನು ಕೊಲೆ ಮಾಡಿದ. ಚೈನಾದ ಟಾಂಗುಟ್ಸ ನಲ್ಲಿಯ ಎಲ್ಲರನ್ನೂ ಹತ್ಯೆ ಮಾಡಿದ. ೨೦೦ ವರ್ಷಗಳ ಅವಧಿಯಲ್ಲಿ ತೈಮೂರ್ ಲಂಗನವರೆಗೆ ಒಟ್ಟು ಮೂವತ್ತು ದಶಲಕ್ಷ ಚೀಣಿಯರನ್ನು, ಭಾರತೀಯರನ್ನು, ಪರ್ಶಿಯನ್ನರನ್ನು, ಅರಬರನ್ನು, ರಶಿಯನ್ನರನ್ನು, ಯುರೋಪಿಯನ್ನರನ್ನು ಹತ್ಯೆಮಾಡಲಾಯಿತು.

೧೭೮೮ ರಲ್ಲಿ ಇಂಗ್ಲೀಷರು ಆಸ್ಟ್ರೇಲಿಯಾಕ್ಕೆ ಬಂದಾಗ ಅಲ್ಲಿಯ ಮೂಲ ನಿವಾಸಿಗಳ ಸಂಖ್ಯೆ ಸುಮಾರು ಮೂರುಲಕ್ಷ ಇತ್ತು; ಆದರೆ ೧೯೨೧ರ ವೇಳೆಗೆ ಆ ಸಂಖ್ಯೆ ೬೦,೦೦೦ಕ್ಕೆ ಇಳಿಯಿತು. ಇದೆಲ್ಲವೂ ಸಹಮಾನವ ಹತ್ಯೆಯ ಸ್ವಭಾವದ ಕಾರಣ.

ಕೋಲಂಬಸ್ ಅಮೇರಿಕಾಕ್ಕೆ ಮೊದಲು ಬಂದಾಗ ಅಲ್ಲಿ ಮೂಲನಿವಾಸಿಗಳಾದ ಅರಾವಾಕ್ ಇಂಡಿಯನ್ಸ್‌ರ ಸಂಖ್ಯೆ ಬಹಳ ದೊಡ್ಡದಾಗಿತ್ತು. ಆದರೆ ೧೪೯೪ ರಿಂದ ೧೫೦೮ ರ ಅವಧಿಯಲ್ಲಿ ಮೂರು ದಶಲಕ್ಷ ಅರಾವಕ್ ಇಂಡಿಯನ್ ಕೊಲೆ ಮಾಡಲ್ಪಟ್ಟರು. ಆ ಮೂಲನಿವಾಸಿಗಳಿಗೆ ಮೋಸಮಾಡಲಾಯಿತು, ವಿಷ ಹಾಕಲಾಯಿತು, ಸಾಮೂಹಿಕವಾಗಿ ನೇಣು ಹಾಕಲಾಯಿತು, ನಾಯಿಗಳೊಂದಿಗೆ ಬೇಟೆಯಾಡಲಾಯಿತು. ಐವತ್ತು ವರ್ಷಗಳ ನಂತರ ಸ್ಪಾನಿಶ್ ಜನಗಣನೆ ಪ್ರಕಾರ ೨೦೦೦ ಅರಾವಾಕ್ ಇಂಡಿಯನ್ಸ್ ಮಾತ್ರ ಇದ್ದರು.

ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಇಂಗ್ಲೆಂಡಿನ್ ವಸಾಹತುಶಾಹಿಗಳು ಮೊದಲು ನ್ಯೂ ಇಂಗ್ಲೆಂಡ್ ಪ್ರದೇಶದಲ್ಲಿ ನೆಲೆಸಿದಾಗ ಅಲ್ಲಿದ್ದ ಪೌಹಾಟನ್ ಮತ್ತು ಪೆಕೋಟ್ ಮೂಲನಿವಾಸಿಗಳನ್ನು ನಾಶಮಾಡಿದುದಲ್ಲದೆ ಅದೇ ಪ್ರಕಾರ ಬೇರೆಡೆಯಿದ್ದವರನ್ನೂ ಕೊಂದರು. ಅಲ್ಲಿಯ ಇಂಡಿಯನ್ಸ್‌ರ ಜೊತೆಮಾಡಿ ಕೊಂಡಿದ್ದ ತಮ್ಮ ಒಪ್ಪಂದವನ್ನು ತಾವೇ ಮುರಿದರು. ೧೯ನೇ ಶತಮಾನದ

ಸಂಯುಕ್ತ ರಾಷ್ಟ್ರ ಸಂಘದ ಜನರಲ್ ವಿಲಿಯಂ ಶರ್ಮನ್ ಕೊಟ್ಟ ಈ ಹೇಳಿಕೆಯನ್ನು ನೋಡಿ, "ಈ ವರ್ಷ ನಾವು ಹೆಚ್ಚು ಜನ ಇಂಡಿಯನ್ಸ್‌ರನ್ನು ಕೊಂದರೆ ಮುಂದಿನ ವರ್ಷ ಕಡಿಮೆ ಇಂಡಿಯನ್ನರನ್ನು ಕೊಲ್ಲಬಹುದು." ಇದು ಅಂದಿನ ಬಿಳಿಯರ ನೀತಿಯನ್ನು ಎತ್ತಿತೋರಿಸುತ್ತದೆ.

ಇನ್ನು ೨೦ನೇ ಶತಮಾನಕ್ಕೆ ಬಂದರೆ ಮೊಟ್ಟ ಮೊದಲನೆಯ ಪ್ರಮುಖ ಸಹಮಾನವ ಹತ್ಯ ೧೯೧೫ ರಿಂದ ೧೯೨೮ರ ವರೆಗೆ ಓಟೋಮನ್ ಟರ್ಕ್ ಸಾಮ್ರಾಜ್ಯದವರಿಂದ ಏಶಿಯಾ ಮೈನರ್‌ನಲ್ಲಿದ್ದ ಆರ್ಮೇನಿಯನ್ಸ್‌ಗಳದಾಗಿತ್ತು. ಸುಮಾರು ಒಂದೂವರೆಯಿಂದ ಎರಡು ದಶಲಕ್ಷ ಆರ್ಮೆನಿಯನ್ನರನ್ನು ಸಿರಿಯಾ ದೇಶದ ಮರಳುಗಾಡಿಗೆ ಸಾಗಿಸಲಾಯಿತು. ಅಲ್ಲಿ ಅವರು ಕೊಲೆ, ಬಲಾತ್ಕಾರ, ಮತ್ತು ಆಹಾರವಿಲ್ಲದೆ ಸತ್ತರು. ಹಿಂದಿನ ರಶಿಯಾ ೧೯೧೭ ರಿಂದ ೧೯೯೧ ರ ವರೆಗೆ ೬೨ ದಶಲಕ್ಷ ನಾಗರಿಕರನ್ನು ಕೊಂದು ಹಾಕಿತು; ಕಮ್ಯೂನಿಸ್ಟ್ ಚೀಣಾ ೨೫ ದಶಲಕ್ಷ ನಾಗರಿಕರನ್ನು ಕೊಂದು ಹಾಕಿತು; ನಾಝಿ ಸರ್ಕಾರ ೧೯೩೩ ರಿಂದ ೪೫ರ ವರೆಗೆ ೨೧ ದಶಲಕ್ಷ ಜನರನ್ನು ಕೊಂದು ಹಾಕಿತು; ಚಿಯಾಂಗ್‌ಕೈ ಶೇಖರ ಕುಮಿಟಾಂಗ್ ಚೀಣಾ ೧೯೨೮ ರಿಂದ ೧೯೪೯ರ ಅವಧಿಯಲ್ಲಿ ೧೦ ದಶಲಕ್ಷ ಜನರನ್ನು, ಸೇನಾಧಿಕಾರಿಗಳ ಜಪಾನ್ ೧೯೩೭ ರಿಂದ ೧೯೪೫ರ ವೇಳೆಗೆ ೬ ದಶಲಕ್ಷ ಜನರನ್ನು ಕೊಂದು ಹಾಕಿತು.

೧೯೭೫ರಲ್ಲಿ ಜನರಲ್ ಸುಹಾರ್ತೋರ ನೇತೃತ್ವದಲ್ಲಿ ಇಂಡೋನೇಶಿಯಾ ಪೂರ್ವ ಟೈಮೋರ್‌ನ ಮೇಲೆ ದಾಳಿ ಮಾಡಿತು ಮತ್ತು ೬ ಲಕ್ಷ ಜನಸಂಖ್ಯೆಯಲ್ಲಿ ೨ ಲಕ್ಷ ಜನಲನ್ನು ಹತ್ಯ ಮಾಡಿತು. ೧೯೪೭ ರಲ್ಲಿ ಭಾರತ ಇಬ್ಭಾಗ ಮಾಡಾಗ ೫ ಲಕ್ಷ ಹಿಂದೂ, ಮುಸ್ಲಿಂ ಮತ್ತು ಸಿಖ್ಖರ ಕೊಲೆಯಾಯಿತು. ಇದು ಸಹ ಒಂದು ರೀತಿಯ ಸಹಮಾನವ ಹತ್ಯೆಯೇ ಆಗಿತ್ತು.

ಇಂದು ಸಹಮಾನವ ಹತ್ಯೆಯನ್ನು ಮಾನವಕುಲದ ವಿರುದ್ಧ ಅತ್ಯಂತ ದೊಡ್ಡ ಮತ್ತು ಭೀಕರ ಅಪರಾಧವೆಂದು ವಿಶ್ವದಾದ್ಯಂತ ಒಪ್ಪಲಾಗಿದೆ. ೧೯೯೮ ರಲ್ಲಿ ಸಂಯುಕ್ತ ರಾಷ್ಟ್ರ ಸಂಘವು ರೋಮ್ ನಗರದಲ್ಲಿ ನಡೆದ ಒಂದು ಸಭೆಯಲ್ಲಿ ಕಾಯಂ ಆದ ಅಂತರ್ ರಾಷ್ಟ್ರೀಯ ಅಪರಾಧ ನ್ಯಾಯಾಲಯವನ್ನು ಸ್ಥಾಪಿಸಲು ನಿರ್ಣಯಿಸಿತು. ಆದರೆ ಅದು ಈ ವರೆಗೂ ಸ್ಥಾಪಿತಗೊಂಡಿಲ್ಲ. ಇದು ವರೆಗೆ ಕೇವಲ ೩೬ ದೇಶಗಳು ಅದನ್ನು ಒಪ್ಪಿಕೊಂಡಿವೆ; ಇನ್ನೂ ೬೦ ದೇಶಗಳು ಒಪ್ಪಿಕೊಳ್ಳಬೇಕಾಗಿದೆ. ವಿಶ್ವ ವಾಣಿಜ್ಯ ಸಂಸ್ಥೆಯ ವಾಣಿಜ್ಯ ಚಟು

೩೨ ನೇ ಪುಟಕ್ಕೆ

ಇನ್ನು ಯುದ್ಧ ಕೂಡದು

-ಲಿನಸ್ ಪೌಲಿಂಗ್

ಇನ್ನೊಂದು ಮಹಾಯುದ್ಧವಾಗಲಾರದೆಂದು ನಂಬಿದ್ದೇನೆ. ಆದರೆ ಇಂದಿನ ವಿಶ್ವ ಪರಿಸ್ಥಿತಿಯ ಗಂಭೀರತೆಯ ಬಗ್ಗೆ ಅಮೇರಿಕೆಯ ಜನತೆಗೂ, ಉಳಿದ ದೇಶಗಳ ಜನತೆಗೂ ಸಕಾಲಕ್ಕೆ ತಿಳಿಸಿದಲ್ಲಿ ಮಾತ್ರ ಇದು ಸಾಧ್ಯ. ಭಯಾನಕ ಅಣು ಬಾಂಬ್, ಹೈಡ್ರೋಜನ್ ಬಾಂಬ್ ಮತ್ತು ಸೂಪರ್ ಬಾಂಬ್ ಒಳಗೊಂಡ ನೂಕ್ಲಿಯರ ಬಾಂಬುಗಳನ್ನು ಉಪಯೋಗಿಸಲಾಗುವ ಯುದ್ಧ ಇನ್ನೆಂದಿಗೂ ಆಗಲಾರದೆಂದು ನಂಬಿದ್ದೇನೆ. ಈ ಭಯಾನಕ ಶಸ್ತ್ರಾಸ್ತ್ರಗಳು ನಮ್ಮನ್ನು ಪ್ರಪಂಚದ ಇತಿಹಾಸದ ಒಂದು ಹೊಸ ಯುಗಕ್ಕೆ ಕರೆದೊಯ್ಯುವವೆಂದು ಭಾವಿಸಿದ್ದೇನೆ. ಆ ಯುಗ ಶಾಂತಿ ಮತ್ತು ವಿವೇಕದ ಯುಗವಾಗಿರುತ್ತದೆ ಮತ್ತು ಅಲ್ಲಿ ವಿಶ್ವದ ಸಮಸ್ಯೆಗಳು ಯುದ್ಧದ ಮೂಲಕ ಪರಿಹಾರಗೊಳ್ಳದೆ ಮಾನವನ ವಿವೇಕಶಕ್ತಿಯ ಅನ್ವಯದ ಮೂಲಕ ಪರಿಹಾರಗೊಂಡು ಎಲ್ಲ ದೇಶಗಳಿಗೆ ನ್ಯಾಯವೂ, ಎಲ್ಲ ಜನರಿಗೆ ಅನುಕೂಲವೂ ದೊರೆಯುತ್ತದೆ.

ಇದೇ ನಮ್ಮ ವಿಶ್ವದ ಮುಂದೆ ಇರುವ ಭವಿಷ್ಯ. ಆದರೆ ಇಂಥ ಭವಿಷ್ಯವನ್ನು ಸಾಕಾರಗೊಳಿಸುವುದು ಸುಲಭವೇನಲ್ಲ. ನ್ಯೂಕ್ಲಿಯರ್ ಬಾಂಬುಗಳಿಂದಾಗುವ ಅನಾಹುತಗಳನ್ನು ತಪ್ಪಿಸಲು ನಾವು ಕಷ್ಟಪಡಬೇಕಾಗುತ್ತದೆ ಎಂದು ಭಾವಿಸಿದ್ದೇನೆ.

೧೯೪೫ ಆಗಸ್ಟ್ ೬ ರಂದು ಬೆಳಿಗ್ಗೆ ೮.೧೫ ಘಂಟೆಗೆ ಮೊಟ್ಟಮೊದಲನೆಯ ಅಣು ಬಾಂಬನ್ನು ನಾಲ್ಕೂವರೆ ಲಕ್ಷ ಜನಸಂಖ್ಯೆಯ ಹಿರೋಶಿಮಾದ ಮೇಲೆ ೨೪೦೦೦ ಅಡಿ ಎತ್ತರದಿಂದ ಅಮೇರಿಕೆಯ ಬಿ ೨೯ ವಿಮಾನದಿಂದ ಹಾಕಲಾಯಿತು. ಅದು ನಗರದ ಮಧ್ಯಭಾಗದಲ್ಲಿ ೨೨೦೦ ಅಡಿ ಎತ್ತರದಲ್ಲಿ ಸ್ಫೋಟಗೊಂಡಿತು. ಸ್ಫೋಟಗೊಂಡ ಕೆಲವೇ ಕ್ಷಣಗಳಲ್ಲಿ ನಗರದ ೬೦ ಭಾಗ ನಾಶವಾಯಿತು. ೧ ಲಕ್ಷ ಸತ್ತರು, ಇನ್ನು ೧ ಲಕ್ಷ ಜನ ಗಾಯಗೊಂಡರು. ಮುಂದೆ ಆಗಸ್ಟ್ ೯ ರಂದು ಮೂರು ದಿನಗಳ ತರವಾಯ ಮೂರು ಲಕ್ಷ ಜನಸಂಖ್ಯೆಯ ನಾಗಾಸಾಕಿ ನಗರದ ಮೇಲೆ ಬಾಂಬನ್ನು ಹಾಕಲಾಯಿತು. ೭೦ ಸಾವಿರ ಜನ ಸತ್ತರು ಮತ್ತು ಅಷ್ಟೇ ಸಂಖ್ಯೆಯ ಜನ ಗಾಯಗೊಂಡರು.

೧೯೪೬ ರಲ್ಲಿ ಆಲ್ಬರ್ಟ್ ಐನ್‌ಸ್ಟೈನ್ ಹೀಗೆ ಹೇಳಿದರು:-

"ಮಾನವಕುಲ ಉಳಿಯಬೇಕಿದ್ದರೆ ಮತ್ತು ಉನ್ನತಮಟ್ಟಕ್ಕೆ ಏರಬೇಕಿ

ದ್ದರೆ ಹೊಸ ಬಗೆಯ ಆಲೋಚನೆ ಅಗತ್ಯ. ಇಂದು ಅಣುಬಾಂಬ್ ನಮಗೆ ಪರಿಚಿತವಿರುವ ಪ್ರಪಂಚವನ್ನು ಬಹಳಷ್ಟು ಬದಲಾಯಿಸಿದೆ. ಆದ್ದರಿಂದ ಮಾನವ ಕುಲವು ಹೊಸ ವಾಸಸ್ಥಳಕ್ಕೆ ಬಂದಂತಾಗಿದೆ. ಅದಕ್ಕೆ ಅನ್ವಯಿಸುವಂಥ ರೀತಿಯಲ್ಲಿ ಆಲೋಚನೆ ಮಾಡಬೇಕಿದೆ. ಆಧುನಿಕ ಯುದ್ಧ, ಬಾಂಬ್ ಮತ್ತು ಅನ್ಯ ಇತರ ಶೋಧನೆಗಳು ಕ್ರಾಂತಿಕಾರಿ ಪರಿಸ್ಥಿತಿಯನ್ನು ನಿರ್ಮಿಸಿವೆ. ಈ ಮೊದಲು ಒಂದು ದೇಶವು ಇನ್ನೊಂದು ದೇಶವನ್ನು ತನ್ನ ಗಡಿಯಾಚೆಗೆ ಸೈನ್ಯವನ್ನು ಕಳು ಹಿಸದೆ ಯುದ್ಧ ಮಾಡಲು ಸಾಧ್ಯವಿರಲಿಲ್ಲ. ಆದರೆ ಈಗ ರಾಕೆಟ್ಸ್ ಮತ್ತು ಬಾಂಬ್ಸ್ ಬಂದಿರುವುದರಿಂದ ಈ ಭೂಮಿಯ ಮೇಲೆ ಯಾವ ಜನ ವಸತಿಯೂ ಅನಿರೀಕ್ಷಿತ ದಾಳಿಯಿಂದ ಸುರಕ್ಷಿತವಾಗಿರಲು ಸಾಧ್ಯವಿಲ್ಲ.

ರೈಫಲಿನ ಗುಂಡುಗಳು ಮನುಷ್ಯರನ್ನು ಸಾಯಿಸುತ್ತವೆ, ಅಣು ಬಾಂಬು ಗಳು ನಗರಗಳನ್ನೇ ಸಾಯಿಸುತ್ತವೆ. ಟ್ಯಾಂಕ್ ಎಂಬುದು ಗುಂಡಿನಿಂದ ರಕ್ಷಣೆ ಕೊಡುತ್ತದೆ. ಆದರೆ ನಾಗರಿಕತೆಯನ್ನು ನಾಶ ಮಾಡುವಂಥ ಶಸ್ತ್ರಗಳಿಂದ ರಕ್ಷಿಸುವ ಉಪಾಯ ವಿಜ್ಞಾನದಲ್ಲಿಲ್ಲ. ನಮ್ಮ ರಕ್ಷಣೆಯೆಂಬುದು ಶಸ್ತ್ರಾಸ್ತ್ರಗಳಲ್ಲಿಲ್ಲ, ಭೂಗತರಾ ಗುವುದರಲ್ಲಿಯೂ ಇಲ್ಲ. ನಮ್ಮ ರಕ್ಷಣೆ ಕಾನೂನು ಮತ್ತು ಸುವ್ಯವಸ್ಥೆಯಲ್ಲಿದೆ.

ಇನ್ನು ಮುಂದೆ ಪ್ರತಿಯೊಂದು ದೇಶದ ವಿದೇಶ ನೀತಿಯು ಒಂದೇ ಒಂದು ಅಂಶದ ಮೇಲೆ ಪರೀಕ್ಷಿಸಲ್ಪಡಬೇಕು. ಆ ನೀತಿಯು ನಮ್ಮನ್ನು ಕಾನೂನು ಮತ್ತು ಸುವ್ಯವಸ್ಥೆಯತ್ತ ಒಯ್ಯುತ್ತದೆಯೋ ಅಥವಾ ದೊಂಬಿ ಮತ್ತು ಮೃತ್ಯು ವಿನತ್ತ ಒಯ್ಯುತ್ತದೆಯೋ? ಒಂದು ಕಡೆಗೆ ಯುದ್ಧ ಸನ್ನದ್ಧರಾಗುತ್ತ, ಇನ್ನೊಂದು ಕಡೆಗೆ ವಿಶ್ವ ಸಮುದಾಯಕ್ಕಾಗಿ ಸಿದ್ಧತೆ ಮಾಡುವುದು ಸಾಧ್ಯವಿಲ್ಲವೆಂದೇ ನನ್ನ ನಂಬಿಕೆ. ತನ್ನ ಆತ್ಮಹತ್ಯೆಯನ್ನು ತಾನು ಮಾಡಿಕೊಳ್ಳಲು ಸಾಧ್ಯತೆ ಯಿರುವಂಥ ಶಸ್ತ್ರವನ್ನು ಮಾನವಕುಲ ತನ್ನ ಕೈಯಲ್ಲಿ ಹಿಡಿದಿರುವಾಗ ಆ ಕೋವಿಯಲ್ಲಿ ಇನ್ನಷ್ಟು ವಿಧ್ವಂಸಕ ಶಕ್ತಿಯನ್ನು ತುಂಬುವುದರ ಅರ್ಥ ವಿನಾಶದ ಸಾಧ್ಯತೆಯನ್ನು ಹೆಚ್ಚಿಸುವುದೇ ಆಗಿದೆ."

ಈಗ ಅಮೇರಿಕಾ, ರಶಿಯಾ ಮತ್ತು ಬ್ರಿಟನ್ ಬಳಿ ಹೈಡ್ರೋಜನ್ ಬಾಂಬ್ ಮತ್ತು ಸೂಪರ್ ಬಾಂಬುಗಳ ಒಂದು ದೊಡ್ಡ ಸಂಗ್ರಹವೇ ಇದೆ.

ಪ್ರಪಂಚದ ಬಹುಸಂಖ್ಯಾತ ವಿಜ್ಞಾನಿಗಳು ಮತ್ತು ಜನತೆ ಇನ್ನು ಮುಂದೆ ಯುದ್ಧ ಕೂಡದೆಂದೇ ಬಯಸುತ್ತಾರೆ. ವಿಶ್ವ ವ್ಯವಹಾರದಲ್ಲಿ ನೀತಿ ಮತ್ತು ನ್ಯಾಯಕ್ಕೆ ಮಹತ್ವದ ಸ್ಥಾನವನ್ನು ಕೊಡಬೇಕಾದ ಸಮಯ ಹಾಗೂ ವಿಶ್ವದ ಸಮಸ್ಯೆಗಳನ್ನು ಅಂತರರಾಷ್ಟ್ರೀಯ ಕಾನೂನುಗಳ ಆಧಾರದ ಮೇಲೆ ಪರಿಹರಿಸ ಬೇಕಾದ ಕಾಲ ಬಂದಿದೆ.

೧೯೫೮ ಜನವರಿ ೧೩ ರಂದು ಒಂದು ಮನವಿಯನ್ನು ವಿಶ್ವರಾಷ್ಟ್ರ ಸಂಸ್ಥೆಗೆ ಅರ್ಪಿಸಲಾಯಿತು. ಆ ಮನವಿಗೆ ೯೨೩೫ ವಿಜ್ಞಾನಿಗಳು ತಮ್ಮ ಸಮ್ಮತಿಯ ಅಂಕಿತವನ್ನು ಹಾಕಿದ್ದರು.

ಮನುಷ್ಯನ ಕ್ರೂರತನ ಮತ್ತು ಯುದ್ಧದ ಹುಚ್ಚುತನವನ್ನು ತಿಳುವಳಿಕೆಯಿಂದ ಜಯಿಸಬೇಕಾದ ಕಾಲವಿದೀಗ ಬಂದಿದೆ. ★

("ನೋ ಮೋರ್ ವಾರ್" ಪುಸ್ತಕದಿಂದ ಅನು : ಸು.ಕೌ)

ಭಯೋತ್ಪಾದಕತೆಯ ಸುಳಿಯಲ್ಲಿ

೫ ನೇ ಪುಟದಿಂದ

ಹಿಂಸೆಯಿಂದ ಹಿಂಸೆ ಬೆಳೆಯುತ್ತದಯೇ ಹೊರತು ಶಮನವಾಗುವುದಿಲ್ಲವೆಂಬುದು ಇಡೀ ಪ್ರಪಂಚದ ಅನುಭವ. ಆದ್ದರಿಂದ ೧೯೪೫ ರಿಂದಲೂ ನಮ್ಮ ಮಧ್ಯ ಇರುವ ಸಂಯುಕ್ತ ರಾಷ್ಟ್ರ ಸಂಘವನ್ನು ನಾವು ಬಲಪಡಿಸಿ ಅದರ ಮೂಲಕ ಭಯೋತ್ಪಾದನೆಯ ನಿರ್ಮೂಲನದ ಪ್ರಯತ್ನವನ್ನು ಸಾಂಘಿಕವಾಗಿ ನಡೆಸಬೇಕು. ಈ ವಿಚಾರದಲ್ಲಿ ಧರ್ಮದ ಮಾತನ್ನೇ ಆಧಾರವಾಗಿಟ್ಟುಕೊಂಡು ಹೇಳುವುದಾದರೆ ಸಿಖ್ಖರ ಗುರುಗ್ರಂಥದಲ್ಲಿ ಒಂದು ಮಾತು ಬರುತ್ತದೆ. **"ಪಂಚ ಪರವಾಣ ಪರಧಾನು........ ಪಂಚಾ ಕಾ ಗುರು ಏಕು ಧಿಯಾನು''** (ಜಪುಜಿ ೧೬) ಅಂದರೆ ಐದೂ ಜನರ ಗಮನ ಒಂದೇ ಆದಾಗ ತೀರ್ಮಾನವಾಗುತ್ತದೆ, ಆಗ ಕಾರ್ಯ ಸಿದ್ಧಿಸುತ್ತದೆ ಮತ್ತು ಧರ್ಮವು ಗಟ್ಟಿಯಾಗುತ್ತದೆ. ಇಲ್ಲವಾದರೆ ೪೯ ಜನರು ಒಂದು ಕಡೆಗೆ ೫೧ ಜನರು ಒಂದು ಕಡೆಗೆ ಆದಾಗ ೫೧ ಜನರ ಮಾತೇ ನಡೆಯುತ್ತದೆ. ಅಂದರೆ ೪೯ ಜನರ ಮೇಲೆ ೫೧ ಜನರ ರಾಜ್ಯಭಾರ ನಡೆದಂತೆ ಇದು ಬೆಂಕಿ ಹುಚ್ಚುವ ಕೆಲಸವೇ ಹೊರತು ಶಾಂತಿಯನ್ನು ತರುವಂಥದಲ್ಲ. ಆದ್ದರಿಂದ ಧರ್ಮಗಳ ವಿಚಾರದಲ್ಲಿ ಈ ಮಾತು ಬರಲೇಕೂಡದು. ತೀರ್ಮಾನಗಳೆಲ್ಲವೂ ಸರ್ವಸಮ್ಮತಿಯಿಂದಾಗಬೇಕು. ಇಂಥ ಪರಿಸ್ಥಿತಿಯನ್ನು ಎಲ್ಲ ಧರ್ಮಗಳ. ಎಲ್ಲ ದೇಶಗಳ ಮುಖ್ಯಸ್ಥರು ಸ್ಥಾಪಿಸುವತ್ತ ಪ್ರಯತ್ನಶೀಲರಾಗಲಿ. ★

ಮಾನವ ಕುಲ ನಾಶ

೨೯ ನೇ ಪುಟದಿಂದ

ಮಟಿಕೆಗಳಿಗೆ ಪ್ರಾಧಾನ್ಯತೆ ಕೊಡಲಾಗುತ್ತಿರುವಷ್ಟು ಅಪರಾಧ ನ್ಯಾಯಾಲಯದ ಸ್ಥಾಪನೆಗಾಗಿ ಮಹತ್ವಕೊಡಲಾಗುತ್ತಿಲ್ಲ. ಈ ಕೆಲಸ ವಿಶ್ವರಾಷ್ಟ್ರ ಸಂಸ್ಥೆಯಿಂದ ಮಾತ್ರವಲ್ಲ ಶಾಂತಿ ಮತ್ತು ಸಹಬಾಳ್ವೆ ಬಯಸುವವರೆಲ್ಲರಿಂದಲೂ ಆಗಬೇಕಿದೆ. ಇಲ್ಲವಾದರೆ ಸಹಮಾನವ ಹತ್ಯೆಯನ್ನು ತಡೆಯಲು ಸಾಧ್ಯವಾಗಲಾರದು ಮತ್ತು ೨೧ನೇ ಶತಮಾನವು ಸಹ ಕಳೆದ ಶತಮಾನದಂತೆಯೇ ದುರಂತದಲ್ಲಿ ಮುಕ್ತಾಯಗೊಳ್ಳುವುದು. ★

("ಹಿಂದೂ" ಸಾಭಾರ :ಅನು : ಸು.ಕೌ)

KA-SKMND-470/-2000. ತೆರದ_ಅಂಚೆ

Regd No. KAR KAN/2000/3820

Vol 2 Issue 3.

Janapada Vichara – Kannada Monthly Digest Edited and Printed by Surendra Koulagi at Janapada Seva Trust Printing Press. Melkote on behalf of Janapada Seva Trust, (Regd) Melkote. Dist – Mandya 571 431.

Phone : 08236/48754